ಶ್ರೀರಸ್ತು.

ಉದಯರಾಗವು.

ಇದು,

ಪಂಡಿತರಿಂದ ಪರಿಶೋಧಿಸಲ್ಪಟ್ಟು

ಬಳ್ಳಾರಿ, ಕರ್ನಾಟಕ ಬುಕ್‌ಡಿಪೋ ಏಜಂಟ್

ಶ್ರೀ. ಶಿವಲಿಂಗಂ ಶೆಟ್ಟರವರಿಗಾಗಿ

ಕರ್ನಾಟಕ ಬುಕ್‌ಡಿಪೋ ಮುದ್ರಾಯಂತ್ರದಲ್ಲಿ

ಮುದ್ರಿಸಲ್ಪಟ್ಟಿತು.

ಬಳ್ಳಾರಿ.

1913.

ಶ್ರೀಕೃಷ್ಣಾಯ.ನಮಃ.

ಉದಯರಾಗಗಳು.

ಏಳು ನಾರಾಯಣನೆಯೇಳು ಲಕ್ಷ್ಮೀರಮಣ। ಯೇಳು ಕಮಲಾಕ್ಷ ಕಮಲನಾಭಾ। ಯೇಳು ಪ್ರಹ್ಲಾದಗೊಲದ ದೇವರದೇವ। ಏಳು ಶ್ರೀಗಿರಿವಾಸ ಶ್ರೀವೆಂಕಟೇಶಾ। ಯೇಳಯ್ಯ ಬೆಳಗಾಯಿತು ॥ಪಲ್ಲವಿ॥ ಕಾಶಿದಾಹಾಲುಗಳು ಕಾವಡೀಯು ಲಿತಂದು। ಲೇಸಾಗಿ ವೊಸರು ಬೆಣ್ಣೆಯು ನುತೆಗದು। ಶೇಷಶಯನನೆಯೇಳು ಸಮುದ್ರಮಥನೆಯು ಮಾಡು ॥ ದೇಶಕ್ಕೆ ಆಯಿತು ಬೆಳಗಾಯಿತೇಳಯ್ಯ ನಾರಾಯಣ ॥ ೧ ॥ ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪವನು ಸುರರು ತಂದಿದ್ದಾರೆ ಸುಜನರೆಲ್ಲಾ ಪುಲ್ಲಲೋಚನ ಮದನಗೋಪಾಲ ಶ್ರೀಕೃಷ್ಣ ಕೋಳಿ ಕೂಗಿತು ಬೆಳಗಾಯಿತೇಳಯ್ಯ ನಾರಾಯಣ ॥ ೨ ॥ ದಾಸರೆಲ್ಲರು ಬಂದು ದೊಳಿದರು ಶನಗೊಂಡು।ಲೇಸಾಗಿ ತಾಳದಂಡಿಗೆಯು ಪಿಡಿದೂ। ಆದಿಕೇಶವನಿಮ್ಮ ವಿಷ್ಣುನಾಮ ಸ್ಮರಣೆ ದೇಶಕ್ಕೆ ಆಯಿತು। ಬೆಳಗಾಯಿತೇಳಯ್ಯ ನಾರಾಯಣಾ ॥ ಏಳು ॥ ... ... ॥ ೩ ॥

—(ಉ ದ ಯ ರಾ ಗ.)—

ಇಲ್ಲಿ ಬಾರೈ ರಾಮಕೃಷ್ಣನೆ। ಇಲ್ಲಿ ಬಾರೈ ರಾಮಚಂದ್ರನೆ। ಇಲ್ಲಿ ಬಾರೈ ಶಕಟಭಂಜನೆ। ಇಂದ್ರಾದಿವಂದಿತನೆ ಕೃಷ್ಣಾ ॥ಪ॥ ಅಂಬೆಗಾಲಿಕ್ಕುತಲಿ ಆಡುತ ತುಂಬೆಗುರಿಯುತ

ಮಕರಕುಂಡಲ । ಬೆಂಬಲವಹಿಡಿದಾಡಿ ನಡೆಯುತಹೆಜ್ಜೆ
ಯಿಕ್ಕುತಲಿ । ಉಂಬೆನೆನುತಲಿಚಿಕ್ಕಆಕೆಯು ಕಂಬನಿಯು
ಕಣ್ಣೀರುಸೋರುತ। ಅಂಬುಜೋದ್ಭವ ಅಮೃತಮೀವೆನು
ಬಾರೊಅಸುರಸಂಹಾರ ॥೧॥ ಹಾಲುಬೆಣ್ಣೆಯುಕೊಡರಂ
ಜಿಸಿಹರುಷದಿಂದಲಿಪಂಚಧಾರೆಯು। ಮೇಲೆಮೇಲೆಜೇನು
ತುಪ್ಪವಹಾಕಿಹದವಮಾಡಿ । ಬಾಲನಿನ್ನಯುಬಾಯಮುಖ
ವನು । ಬಗೆಬಗೆಯಲಿ ತೊಳದುನಾಮವ । ಶೀಲದಿಂ
ದಲಿಯಿಟ್ಟು ಕುಟ್ಟುಕುಣಿಸುವತರಣಿಶತತೇಜ ॥ ೨ ॥ ಬಾ
ಯೊಳಗೆಬ್ರಹ್ಮಾಂಡತೋರ್ಪನೆ। ಕಾಯಜನಕಡುಪೀಯು
ದಾತನೆ। ಮಾಯರಹಿತನೆಸೂತ್ರಧಾರನೆಮಮತೆಯೊವು
ತಲೆ। ರಾಯಪಾರ್ಥನರಥವನಡಿಸದೆ। ಸ್ತ್ರೀಯರೊಳುಹ
ದಿನಾರುಸಾವಿರ। ಪ್ರಿಯದಿಂದಾಳಿದವೆಚನ್ನಿಗ ಮುದ್ದು
ಪುರಂದರವಿಠಲನೆ ॥ ... ... ॥೩॥
ಭವಿಷ್ಯೋತ್ತರಪುರಾಣವೆಂಬೀ ವೆಂಕಟೇಶ ಮಹಾತ್ಮ್ಯೆ.

ಉದಯರಾಗ.

ರಾಗ-ಭೂಪಾಳಿ ॥ ಹರಿಯೆಶ್ರೀವೆಂಕಟಾಧೀಶನೆ ॥ಪ॥
ಧರೆಯೊಳತಿಶಯವಾದ ನೈಮಿಶಾರಣ್ಯದೊಳು । ಪರಮ
ಋಷಿಶೌನಕಾದಿಗಳೆಲ್ಲವೊಂದಾಗಿ। ಗುರುಸೂತರಿಂದಶ್ರೀ
ಹರಿಯಚರಿತೆಗಳನ್ನು। ಹರುಷದಿಂದಲಿಕೇಳುತಾ॥ ಕರಿರಾ
ಜವರದಜಗನ್ನಾಥದೇವನಮಹಿಮೆ । ಪರಮಭಕ್ತಿಯಲಿ
ನಾವುಕೇಳಿದೆವುತಮ್ಮಿಂದ । ಗರುಡವಾಹನನಾದ ವೆಂಕ
ಟೇಶನಚರಿತೆ। ಕರುಣಿಸೈನಮಗೆಂದರು ॥ ೧॥ ರುಷಿಗಳೆಲ್ಲ

ತಿವಾತನನುನಗುತಕೇಳುತ್ತ।ಉಸವಿಸಂತೋಷದಲಿಆನಂ
ದಗೂಡುತ್ತ । ಕುಸುಮನಾಭನದಿವ್ಯಘನವಾದಚರಿತೆಗ
ಳ। ಉಸುರುನೀವುನಾವುಕೇಳಿಯುಂದಾ ॥ ವಸುಧಯೊಳು
ಈದಿವ್ಯಕಥೆಯುಇಷ್ಟಾರ್ಥಗಳು । ವಸುಧೆಪತಿಜನಕೇಂ
ದ್ರನಿಗೆಗುರುಶತಾನಂದನರು । ಹಸನಾಗಿಪೇಳಿದರುಅಕ
ರೆಯುವರ್ಣಿಸುವೆಸ್ಥಿರಭಕ್ತಿಯಿಂಕೇಳಿರೈ ॥೨॥ ಧರೆಯೊ
ತಿಶಯುವಾದಮಿಥುಳಪಟ್ಟಣದಲ್ಲಿ। ಧರಣಿಪತಿಘನಕೇಂ
ದ್ರನಿಗೆಪರಮ ಸಂತೋಷದಲಿ । ಧರೆಯುಪಾಲಿಸುತಿರಲು
ಕುಶಕೇತುವೆಂಬನುಜನುಜ ಸುರರನಗರವೆಪಡಿಯುಲು ॥
ುರುತರದದುಃಖದಿಂತನ್ನಮಕ್ಕಳನೋಡಿ । ಮರುಗಿಮ
ುಗುತಲಿರೆಗುರುಶತಾನಂದನರು। ಅರಮನೆಗೆನಡೆತರಲು
ರಸುಯೆದುರಿಗೆಬಂದು। ಚರಣದೊಳುನಮಿಸಿನಿಂದಾ ॥
॥ ಕನಕಮಯುಪೀಠದಲಿಕುಳಿಸಿಕೇಳಲುಮುನಿಯು। ಜ
ಪಕೇಳೈನೀನುಮನದಿ ಚಿಂತೆಯುತ್ಯಜಿಸು । ಘನವಾದ
ೈಕುಂಠಗಿರಿಮಹಾತ್ಮೆಗಳನ್ನು ವಿನಯುದಿಂದಲಿಲಾಲಿಸು
ನಜಸಂಭವಕೇಳೆ ಬ್ರಹ್ಮಪಟ್ಟವುಬಂತು । ವನಿತೆಶಚಿ
ಾಂತನಿಗೆ ಇಂದ್ರಪಟ್ಟವುಬಂತು । ಕನಕಗಿರಿಮಹಿಮೆ
ುನವು ॥೪॥ ವೃಷಭಾಸುರನುಯೆಂಬೋ ಅಸುಗೇಂದ್ರ
ರ್ವತದಿ । ರುಷಿಗಳೆಲ್ಲಿರಶ್ರಮವಪಡಿಸೆದೂರದುಃಖರಿರೇ।
ಸುಮನಾಭನುಬರಲುಸಮರವನುಮಾಡಿದನುಯುಸವ
ಕ್ತಿಯುಲಿಸ್ತುತಿಸೆ । ಅಸುರವೈರಿಯುಖಳಗೆಮುಕ್ತಿಯು
ುಕರುಣಿಸುತ । ಪೆಸರನಿಟ್ಟನು ಗಿರಿಗೆ ವೃಷಭಾಚಲವು

ಯೆಂದು ॥ ವಸುಧೆಯೊಳುಕೃತಯುಗಕೆ ಕೇಳ್ಮೈರ್ಯ್ಯರಾ
ಜೇಂದ್ರಯೆಷ್ಟುಪೇಳಲಿಅದ್ಭುತಾ ॥ ೫ ॥ ಕೇಸರಿಯುಯೆಂ
ಬೋಮರ್ಕಟನ ಸತಿಅಂಜನೆಯುಲೇಸಾದವರವ ಮತಂ
ಗನಿಂದಲಿಗೊಂಡು । ವಾಸುದೇವನಗಿರಿಯೊಳ್ಯಾಯುದೆ
ವರಕುರಿತು ತಪದಿನಿಂದಳುಭಕ್ತಿಲೀ ॥ ಯುಸುದತಿಗರ್ಭ
ದಲಿವಿಕ್ರಮನುಜನಿಸಿದನು। ಶ್ರೀಶನಾರಾಯಣನನಿಜದಾ
ಸಹನುಮಂತ । ಕೇಶವನಗಿರಿಗೆ ಅಂಜನಾಚಲವುಯಂ
ನುತತ್ರೇತಾಯುಗಕೆನಾಮವು ॥ ೬ ॥ ಶೇಷವಾಯುವಿನ
ವಾದದಲಿಸಮರಬಲಿದಾಗಿ । ಶೇಷಶಯನನ ಅನುಜ್ಞೆಯ
ಲಿಂದಗಿರಿಸಹಿತ। ಘಾಸಿಮಾಡದೆ ಶಿಖರವನುಯಿಟ್ಟನುಮ
ರತನುಜಾಸನವಾದ್ಯರು ಪೊಗಳಲು ॥ ಶೇಷಾಚಲವುಯೆಂ
ದುದ್ವಾಪರಯುಗದಿನಾಮವು । ವಾಶಿಯಾಯಿತುಕೇಳ
ರಾಜರಾಜೇಶ್ವರನೇ । ಯೋಸುಸಂಭ್ರಮವನ್ನು ವರ್ಣಿಸ
ವೆಕೇಳಯ್ಯದೋಷರಹಿತನಚರಿತೆಯ ॥ ೭ ॥ ಧರಣಿಸುರ
ನೊಬ್ಬಮಾಧವಭಟ್ಟನೆಂಬುವನು।ತರುಣಿಕುಂತಳೆಯೊಂ
ಬೋಚಂಡಾಲಕೃತ್ಯದಲಿಯಿದ್ದ ವಿಪ್ರ ಮರಣವನುಪೊಂ
ದಿದಳುಕೆಲವುದಿವಸದಮೇಲೆ। ಮರುಗಿಕೆಳವಳಿಸುತ್ತ ಧರ
ಯುಲ್ಲತಿರುಗಿದನು।ತಿರುಪತಿಗೆಬರುವವರವಡಗೂಡಿತಾ
ಬಂದುಕಪಿಲ ತೀರ್ಥದಿಸ್ನಾನವ ॥ ೮ ॥ ಪರಮನೇಮದಿ
ಮಾಡಿತೀರ್ಥಶ್ರಾದ್ಧವರಚಿಸಿ । ಗಿರಿಯುಹತ್ತಿದನು ಸ್ವಾ
ಮಿಪುಷ್ಕರಣಿಯೆಂಬೋ । ಸರಸಿನಲಸ್ನಾನವನುಮಾಡಿ
ಪಾಪಗಳೆಲ್ಲವ ಮನವಮಾಡಿದಾಕ್ಷಣದಲಿ ॥ ಸರಸಿಜಾಸನ

ಅಂತರಿಕ್ಷದಲಿಪೇಳಿದನುಧರಣಿ। ಸುರಕೇಳೂ ನೀಮಾಡಿ
ದಂಥಾದೋಷಪರಿಹಾರಗಳಾಯ್ತು ಬಹುಪುಣ್ಯವಂತನು
ನೀನುಆಕಾಶರಾಯನೆಂದು ॥೯॥ ನಾರಾಯಣಾಖ್ಯನಗರ
ದಿರಾಜ್ಯಭಾರವನು। ಮೀರೆಯಿಲ್ಲದೆಮಾಡುಸತ್ಯದಿಂದಲಿ
ನೀನು। ವಾರಿಜಾಕ್ಷನುಮುಂದೆಈಗಿರಿಯೊಳಗೆನೆಲಸುವನು
ಆದಿಶಕ್ತಿಯುನಿನ್ನಲಿ ॥ ತರಳೆರೂಪದಿಪದ್ಮವತಿಯುಂದು
ದಗಳಾಗೆ।ಹರಿಗೆಕೊಡುಸ್ವಾಮಿಜಾಮಾತನಾಗುವನಿನಗೆ
ವರಹದೇವನ ದರುಶನವಮಾಡುಯೆಂದನುತಕರುಣಿಸಿದ
ಅಪ್ಪಣೆಯನು ॥೧೦॥ ಮಾಡಬಾರದಪಾಪ ಮಾಡಿದರು
ಪೋಪುದೈ। ನಾಡಿನೊಳುಯಿೂಗಿರಿಗೆಸಮವಿಲ್ಲಕೇಳಯ್ಯ।
ರೂಢಿಗತಿಶಯವೆಂಕಟಾಚಲವು ಪೆಸರಾಯ್ತು। ಬೇಡಿದ
ವರಗಳಕೊಡುವದು ॥ ಆಡಲಮ್ಮೆನುದೊರೆಯೆ ಈಮಹಿ
ಮೆಘನವಯ್ಯ। ಕಾಡದಮೃತ್ಯುಗಳು ಸಕಲದುರಿತಕ್ಷ
ಯವು। ಪಾಡಬೇಕೈನಿತ್ಯಕಡಲಶಯನನ ನಾಮಯೆಂ
ದುಪೇಳಿದಮುನಿಪನು ॥೧೧॥ ಈಮಾತಕೇಳಿಜನಕೇಂದ್ರ
ಹರುಷವತಾಳಿ। ಈಮಹಾಪರ್ವತಕೆದೇವಬಂದನುಹ್ಯಾಗೆ
ಪ್ರೇಮದಿಂದಪ್ಪಣೆಯಕೊಡಿ ಯನ್ನ ಗುರುಶತಾನಂದ
ಪೇಳಿದಕಥೆಯನು। ಸೋಮಶೇಖರಜಟಾವಲ್ಲಭಯತೀ
ರದಲಿ। ಆಮಹಾರುಷಿಗಳೆಲ್ಲರುಯನ್ನ ಕೈಕೊಳಲು। ಸೋ
ಮಕಾಂತಿಯಲಿನಾರದರು ಬಂದುಪೇಳಿದರು ಮೂರುದೇ
ವರೊಳಧಿಕರು ॥೧೨॥ ಯಾರುಶ್ರೇಷ್ಠರು ನೀವುಯಾವ
ದೇವರಕುರಿತು। ಭೂರಿಯಜ್ಞವಮಾಡುಪಿರಿ ಪೇಳಿಯೆಂ

ದೆನಲು । ಧಾರುಣೀಸುರರೆಲ್ಲ ಭೃಗುರುಷಿಗಳನೆಕರಿತು । ಕೆಳುಹೆಬಂದರು ವೇಗದಿ ॥ ಶಾರದೆಯುಪತಿಬಳಿಗೆಬಂದು ಅವಗುಣಕಂಡು । ಧಾರುಣೀಯೊಳಗೆ ಪೂಜಿಸಲುಬೇಡ ವೆಂದೆನುತಲಿ । ಕ್ರೂರಶಾಪವಕೊಟ್ಟರುದ್ರನವಗುಣನೋ ಡಿನಿನ್ನರೂಪಿಗೆಪೂಜೆಯು॥೧೩॥ ಯಾರುಮಾಡಲುಬೇಡ ನಿನ್ನಲಿಂಗಕೆಪೂಜೆ । ಪೋದಂತೆನಡೆಯುಳೆನ್ನುತ ಶಾಪ ವನ್ನು ಕೊಟ್ಟು । ಸಾರಿಬಂದನುಶ್ರೀವೈಕುಂಠದೇವನಬಳಿ ಗೆಕಾಲಲೊದ್ದನುವುದರವ ॥ ಮುರಹರನುನೋಡಿಭಕ್ತಿ ಯುಲಿಚರಣಕಭಿನಮಿಸಿ । ಪರಿಪರಿಯುವುಪಚಾರವನುಮಾ ಡಿಭೃಗುರುಷಿಯು । ಪರಮಹರುಷವತಾಳಿಪೊರಟುವೇಗ ದಿಬಂದುಬರದುಪೇಳಿದರುಲ್ಲರೂ ॥೧೪॥ ಮೂರುದೇವ ರೊಳಧಿಕಲಕ್ಷ್ಮೀನಾರಾಯಣನು । ಧಾರುಣೀಪುರದಲ್ಲಿರು ಷಿಗಳಲಿಸಹಿತಾಗಿ । ವಾರಿಜಾಕ್ಷನಿಗೆಅರ್ಪಣೆಯೆಂದುಮಾ ಡಿದನೀವೆಲ್ಲಯುನ್ನುತನುಡಿದನು ॥ ಕ್ರೂರಕೋಪವತಾಳಿ ಶಿರಿದೇವಿಹರಿಯೊಡನೆ । ಸಾರಿಬಂದಳುಕೊಲ್ಲಾಪುರಕೆತ್ರಿ ಜಗನ್ಮಾತೆವಾರಿಜಾಕ್ಷನು ಬಹಳಮರುಗುತ್ತ ವೈಕುಂಠಪು ರದಿಂದಬಂದಗಿರಿಗೆ ॥೧೫॥ ನೂರುಯೋಜನನೀಳ ಆಮ ಹಾಪರ್ವತವು । ಮೇರುಯಲ್ಲದೆ ಇರುವುದೈ ಪುಷ್ಪವೃಕ್ಷ ಗಳು । ಮೂರುಕೋಟಿಯುತೀರ್ಥಯಿರುವದೈ ಸಂತಸದಿ ಸ್ವಾಮಿಪುಷ್ಕರಣಿತೀರ್ಥ ॥ ನಾರದಾದಿಗಳೆಲ್ಲವಾಸವಾಗಿ ರುತಿಹರು । ನಾರಸಿಹ್ಮನಗಿರಿಗೆ ಮುಖಭಾವಕೇಳ್ಳೈಯ್ಯ । ನೂರೆರಡುಯೋಜನವುಜಾಹ್ನವಿಗೆಪುಚ್ಛ ಶ್ರೀಶೈಲವೈಕೇ

ಳುಯೆಂದ ॥೧೬॥ ಕರವೀರಶೇವಂತಿಮೊಲ್ಲೆ ಮಲ್ಲಿಗೆಜಾಜಿ ಪರಿಮಳದಚಂಪಕವುವಲ್ಲಭಾಪಿಲಿಪಟರಿ। ಸಿರಿತುಳಶಿಕೇತಕಿಯುಪುರಗಿನಂದ್ಯಾವರ್ತ ಸುರಹೊನ್ನೆ ಮರುಗಬಿಲ್ವಾ॥ ಪರಿಪರಿಯಪುಷ್ಪಂಗಳೆಲ್ಲವಿಕಸಿತವಾಗಿ। ಇರುವದ್ಯೆಅಗಿರಿಯುಫಲಭರಿತವೃಕ್ಷಗಳು । ಅರಳಿಆಲವು ಅತ್ತಿ ತೆಂಗುನಾರಿಂಗಗಳುಮೆರೆಖರ್ಜೂರಕದಳೀ ॥೧೭॥ ಪನಸದಾಡಿಮಕ್ರಮುಕಚೂತನೇರಳೆಧಾತ್ರಿ । ದಿನಪಬಿಂಬವ ಅದರುವಂತೆಯಿರುವಂತೆಇರುವದುವೃಕ್ಷ । ವನಜಸಂಭವಬಲ್ಲ ಈ ಮಹಾಪರ್ವತವುಎಣಿಕೆಯಿಲ್ಲದತರುಗಳು॥ ಗಿಣಿಯು ಕೋಗಿಲೆಹಂಸೆ ಚಕ್ರವಾಕವುನವಿಲು । ವನದಲ್ಲಿಗೃಧ್ರವಾಯಸಗರುಡಕಾರಂಡ । ಮನದಣಿಯಲಾಡುತ್ತ ಇರುವದ್ಯೆಸಂಭ್ರಮದಿಪರಿಪರಿಯಮೃಗಗಳ್ವಿಂಡು॥೧೮॥ ಕರಡಿಕಾಡೆಮ್ಮೆಕಾಡೊಣಕರಿಸಿಹ್ಮಗಳುಹರಿಣ । ಶರಭವ್ಯಾಘ್ರವುಕಾಡ್ವಂದಿಸರ್ಪಗಳುಮೊದಲೊಂಡು । ಬರುತಿಹದುಮೃಗಗಳ್ವಿಂಡುಗಳಲ್ಲಿ ಪರಮಶ್ರೇಷ್ಠವು ಪರ್ವತಾ ॥ ಧರೆಯೊಳಗೆಯಿರುವಂಥಮೂರುಕೋಟಿಯತೀರ್ಥ । ಬರುವದ್ಯೆಧನುರ್ಮಾಸಶುದ್ಧ ದ್ವಾದಶಿದಿನದಿ । ಅರುಣವುದಯದಿಸ್ನಾನವನುಮಾಡೆ ದುರಿತಗಳು ಪರಿಹರವು ತಕ್ಷಣದೊಳು ॥ ... ... ॥೧೯॥

ಶ್ಲೋ॥ ಧನುರ್ಮಾಸೇಸಿತೇಪಕ್ಷೇ ದ್ವಾದಶ್ಯಾಮರುಣೋದಯೆ । ಆಯಾಂತುಸರ್ವತೀರ್ಥಾನಿಸ್ವಾಮಿಪುಷ್ಕರಣೀತಟೇ॥ ಇಂಥಾ ಅತಿಶಯವಾದಸ್ವಾಮಿಪುಷ್ಕರಣೀಗೆ

ತಿಂತ್ರಿಣೀವೃಕ್ಷದಕ್ಷಿಣದಿಕ್ಕಿನಲ್ಲಿಹುದು । ಕಂತುಪಿತನನು ಬಂದವಲಿಕದೊಳುಪೊಕ್ಕು ಸಂತಸದಿಯಿರುತಿರ್ದನು ॥ ಬಂದುಕಲಿಯುಗಅಷ್ಟವಿಂಶತಿಯುಸಂದ। ನಂತರದಲ್ಲಿ ಚೋಳರಾಯನುಯೆಂಬೊನೃಪಪುಟ್ಟ । ಚಿಂತೆಯಿಲ್ಲದೆಧರ್ಮದಿಂದಆಳಿದಧೊರೆಯು ಶಿರಿದೇವಿಗೋಪಿಯಾಗಿ ॥೨೦॥ ಸರಸಿಜಾಸನಗೋಪರೂಪವತಾಳಿದರುದ್ರ। ಕರುವುಆದನುಚೋಳರಾಯನಲ್ಲಿಗೆಬಂದು । ಕರುವುಹಸುಸಹಿತಾಗಿ ಕೊಟ್ಟಳೈಮೌಲ್ಯಕ್ಕೆ ಅರಸನೋಡಿದಪ್ರೀತಿಲೀ ॥ ತುರುಕರುವಕಾಯುವಿಕೆಗೋಪಾಲನಿಗೆಪೇಳೆ। ಗಿರಿಯಮೇಲಕೆ ಬಂದುಮೇಯುವಕೆಬಿಡೆ ಆಗ । ಹರಿಯಿರುವ ದಾಲ್ಮೀಕೆ ಮೇಲೆಕ್ಷೀರವಕರದಬರುತಲ್ಲಿದ್ದವುತುರುಕರು ॥೨೧॥ ಒಂದುದಿನದಲಿಕ್ಷೀರಯಿಲ್ಲದೇಇರುತಿರಲು । ಚಂದಿರಾನನರಾಜಪತ್ನಿನೋಡುತಬೇಗ । ಮಂದಭಾಗ್ಯನೆಯಂದುಗೋಪಾಲಕನಬಡಿಯೆಬಂದುನೋಡಿದ.ಗಿರಿಯೊಳು ॥ ನಿಂದುಕ್ಷೀರವಕರೆಯೆನೋಡಿಕೋಪವತಾಳಿ । ಇಂದುಬಡಿಯುವೆನೆಂದು ಕೊಡಲಿಯನುಪಿಡಿದೆತ್ತಿ । ಸಿಂದುಶಯನನು ಹುತ್ತದಿಂದಮೇಲಕೆಬಂದು ತಲೆಯನೋಡಿದದೇವನು॥ ೨೨॥ ಪಳುತಾಳದವುದ್ಧಶೋಣಿತವುಚಿಮ್ಮಿದುದು। ಅಳುಗೋಪಾಲಕನು ಅಲ್ಲೆ ಮೃತವಾದನು । ಭಾಳದುಃಖದಿಗೋವುಅರಸನೆದುರಲಿನಿಲ್ಲೆ ಪೊರಟುಬಂದುದು ಅಲ್ಲಗೆ ಆಲಿಸುತಮೌನವನುಪಿಡಿದುನಿಲ್ಲಲು ಅರಸ । ಶ್ರೀಲೋಲವಿಶ್ವರೂಪದಿಬಂದಃಪೇಳಿದನು। ಕೇಳುನೀ ಭೂವಿಃಯೊ

ಳುಪಿಶಾಚನಾಗಿಜನಿಸೆಂದುಅಪ್ಪಣೆಕೊಟ್ಟನು॥೨೩॥ ಮು
ರಹರನೆನಾನೊಂದನರಿಯೆಶಾಪವುಂಟೆಕರುಣವಿಡೊಸ್ವಾ
ಮಿಯುನ್ನುತಪೇಳೆದೇವೇಶ । ಧರಣೀಶಆಕಾಶನೃಪನನಿಜ
ಸುತೆಯುನ್ನು ವಲಿಸಿವೈವಾಹಿಕವನು ॥ ರಚಿಸುವೆ ಆವೇಳೆ
ನೂರುಭಾರದಮಕುಟ। ಕರುಣಿಸುವಶುಕ್ರವಾರದದಿವಸ
ಧರಿಸುವೆನು । ದರುಶನವನೀವಮಾಡುಈಮಹಾಶಾಪವನು
ಹರಿದುಪೋಗುವದುಯೆಂದು । ಈರೀತಿಯುಂ ಕೆಲದಿನದ
ಲ್ಲೆಸ್ವಾಮಿತಾನಾಗ । ಧೀರಗುರುಗಳಸ್ಮರಿಸೆಬೃಹಸ್ಪತಿ
ಗಳುಬಂದು। ವಾರಿಜಾಕ್ಷನೆಕೇಳೊಯುಕ್ಕಿಹತ್ತಿಯುಅತ್ತಿ
ಕ್ಷೀರದೊಳು ನೆನಸಿಧರಿಸು ನಾರದಾದಿಗಳೊಂದ್ಯೆಘಾಯ
ಪೋಗುವದೆನ್ನೆ । ಶೌರಿದಿನಚರಿಯುದೊಳುವನದೊಳಗೆಬ
ರುತಿರಲು । ಮೂರುಲೋಕಾದೀಶ ವರಹದೇವನಕಂಡು ।
ನೂರುಹೆಜ್ಜೆಯುಭೂಮಿಯು ॥೨೪॥ ಕೇಳಕೊಟ್ಟನುತನ್ನ
ತಂಗಿಬಕುಳೆಯುಕೊಟ್ಟು । ಪಾಲಿಸಿದಳುತನ್ನ ಸುತನತೆರ
ದಲಿಹರಿಯು । ಶ್ರೀಲಕ್ಷ್ಮೆಪತಿಯುಸರ್ವಾಭರಣವಾಲಂಕರಿ
ಸಿತುರುಗನೇರಿದದೇವನು ॥ ಭಾಳಸಂತೋಷದಲಿಬೇಟೆನಾ
ಡುತಬಂದ । ಲೋಲಾಕ್ಷೆಯುರಕಂಡಶೃಂಗಾರವನದಲ್ಲಿ
ಮೇಲಾದಸರಸಮಾತುಗಳನ್ನು ಆಡಿದನುಬಾಲೆಯುರಕೊ
ಡೆದೇವ ॥೨೫॥ ಬಾಲೆಯುರುಯಾರೆಂದು ರಾಜಶೇಖರನು
ಡಿಯೆ । ಲಾಲಿಸ್ಯೆಆಕಾಶನೆಂಬೊನೃಪಜನಿಸಿದನು। ಪಾಲಿ
ಸಿದಧರಣಿಯುನುಮಕ್ಕಳಿಲ್ಲವುಯೆಂದು । ಯಾಗವಮಾಡಿ
ದಧರಣಿಪಲೋಲಾಕ್ಷಿದೊರಕಿದಳುಪದ್ಮಪತ್ರದಿದೇವಿ। ಕೇ

ಳೊಬಾಸರವುತಿಯುಂತೆನೀತ್ರಿಳಿಯೆಂದು। ಪಾಲಿಸಿದಳಪ್ಪ
ಣೆಯುಸುರಮುನಿಪನಾರದನು ತಾಳಿದನುಸಂತೋಷವಾ
ದೇವದೇವನರಾಣಿಇವಳುಯನ್ನುತಪೇಳೆ। ಭಾವಕಿಗೆಪೆಸ
ರಿಟ್ಟನು ಪದ್ಮವತಿಯೆಂದು। ಹಾವಭಾವದಿ ಮುನಿದಿಸಂ
ತೋಷವಮಾಡಿದನು ಸತಿಯುಗರ್ಭವಧರಿಸಿದಳು। ಶ್ರೀವ
ಧೂವರನಕರುಣದಿಪುಟ್ಟಿದರುಸುತರು। ಯಾವಕಡೆಯು
ಲುಯಿಂವಗೆ ಆನಂದಪುಟ್ಟಿದುದು। ಭಾವಜನಪಿತನರಾಣಿಗೆ
ಯುವ್ವನವುಬಂತುಮನಕೆಬಂದಳುಕ್ರೀಡಿಗೆ ॥೨೮॥ ಆನಾ
ರಿಯುರಕೊಡೆ ಸಂಭಾಷಣೆಯುಮಾಡ। ಲೇಣಾಂಕವದನ
ಯುರುಕಲ್ಲುಪಳಲಿಯೆಸೆಯೆ। ಶ್ರೀದೇವರಮಣ ನೇರಿದತು
ರುಗಕೆತಾಕಿವುಸುರನಿಂಗಿಬಿದ್ದಿತು॥ ಈನಿರೋಧವುಈಗ
ಬಂತೆಂದುದೇವೇಶ। ಶಾನೆದುಃಖವತಾಳಿಬಂದುಮಲಗಿದ
ಸ್ವಾಮಿ। ಮಾನವೇಂದ್ರನಸುತೆಯುವಿರಹತಾಪದಿತನ್ನ
ಅರಮನೆಗೆನಡದಳಾಗ ॥೨೯॥ ಇತ್ತ ಬಕುಳೆಯುಸ್ವಾಮಿ
ಯುನೆನೋಡಿ ಕಳವಳಿಸಿಯುತ್ತಣದದುಃಖವ್ಯೆ ಬ್ರಹ್ಮಾಂ
ಡನಾಯಕನೆ। ಉತ್ತಮದಿತರುಣಿಯುನುಕಂಡೆಯೊಹ್ಯಾ
ಗೆನಲುಯೆದ್ದುಕುಳಿತನುದೇವನು। ಪೃಥ್ವೀಶ ಆಕಾಶರಾ
ಯುನೆಂಬನ ಸುತೆಯುಮತೇಭಗಮನೆಯುರೊಳುಪ್ರೋಲ್ವ
ರ್ವ್ಯರಿಲ್ಲಮ್ಮ। ಚಿತ್ತವಿಭ್ರಮನಾಗಿತುರಗವನುಕಳಕೊಂ
ಡೆವಸುತೆಯುನುಕೊಡಿಸಮ್ಮ॥೩೦॥ ತರುಣಿಪೂರ್ವದಿಯಾ
ರುಪೇಳುಯುನೆಕಂದಯ್ಯ। ಮರುಗಿಕೇಳಲು ದೇವವುತ್ತ
ರವಕೇಳಿದನು। ತರುಣಿವಂಶದಿಪುಟ್ಟ ಸೀತೆಯುನುವದ

ಗೊಂಡುಇರುತ್ತಿದ್ದೆಪಂಚವಟಿಯೊಳ್ । ದುರುಳರಾವ
ಣಸೀತೆಯನುವ್ಯೈಯುಬೇಕೆನ್ನ । ಹರಿಣಾಕ್ಷಿಮಾಯಸೀತೆ
ಯುಮಾಡಿಇರಿಸಿದಳು। ಧರಣಿಸುರಯತಿಯಾಗಿಮಾಯ
ಸೀತೆಯುಗೊಂಡುಪುರಕೆಪೋದನುಅಸುರನು ॥೩೧॥ ಮ
ರುಗುತ್ತಬರುತಿರಲುಮರುತನುಜನೋಡುತ್ತ । ತರುಣಿ
ನಂದನನೊಡನೆ ಪರಮಸಖ್ಯವಮಾಡಿ । ಧೊರೆವಾಲಿಯ
ನುಕೊಂದು ಹರಿಸೇನೆವಡಗೊಂಡು ಶರಧಿಸೇತುವೆಯುಕ
ಟ್ಟಿ॥ ದುರುಳರಾವಣರಕ್ಕಸರನೆಲ್ಲರನುಕೊಂದುಶಿರಿಸಿಂಹ
ಪೀಠವಿಭೀಷಣಗೆವಲಿದಿತ್ತು । ಸರಸಿಜಾಕ್ಷಿಯುರಕೆರಸಿಯು
ಜ್ಞೀಶನಲಿಪೋಗಿ ಸತಿಗಳಿಬ್ಬರುಬಂದರು ॥೩೨॥ ಜಾನ
ಕಿಯುಪೇಳಿದಳುಈತರುಣಿಯನುಗ್ರಹಿಸು । ಮಾನನಿಧಿ
ಬಿಡಬೇಡವೆಂದು ಬಿನ್ನೈಸಿದಳು । ನಾನೇಪತ್ನಿವ್ರತಕ್ಕೆ
ಕೊಂಡುಇರುತಿರೆನು ಈವನಿತೆಕಲಿಯುಗದಲಿ ॥ ಮಾನ
ವಾಧೀಸಆಕಾಶರಾಯನಿಗೆಸುತೆಯಾಗಿ । ಧ್ಯಾನಿಸುತಲಿ
ರಲಿತಿರುಪತಿಯಲ್ಲಿಸೆಲಸುವೆನು । ನಾನೆಸಂಪ್ರೀತಿಯಲಿ
ವಡಗೊಳ್ವೆಯಂದಭಯವಿತ್ತ ಕಾರಣದಿಂದಲೀ ॥ ೩೩ ॥
ನೀನುಪೋಗಮ್ಮಯ್ಯನೃಪನಮಂದಿರಕೀಗ ಯೇನಾದ
ರೂಸಂದಿಯನುಮಾಡಿಸಂಘಟಿಸೆ। ಪನೇನುಬೇಕೊನಿನ
ಗಿಂದೀಗಕೊಡುತಿರುವೆ ಯೆಂದುಕಳುಹಿದಬಕುಳೆಯು॥
ಧ್ಯಾನಿಸುತಮುರಹರನ ಬೇಗಬಂದಳುಪುರಕೆ । ಮಾನ
ವೇಂದ್ರನರಾಣಿಧರಣಿದೇವಿಯುಕಂಡು। ಕೇಳಮ್ಮಕನ್ಯಾ
ರ್ಥದಿಂದಲಿಬಂದೆಶ್ರೀವೆಂಕಟೇಶನಿಗೆ ॥೩೪॥ ಅವನತಂದೆ

ತ್ತಾಯಿವಸುದೇವದೇವಕಿಯು । ಅವನಕುಲಚಂದ್ರವಂಶ
ಜನುದೇವಾಧೀಶ । ಅವನಿಗಿರುವಂತಸೆಂಟರು ಗಣಸೆಇಲ್ಲ
ವ್ಮುಅವನಭೋಗವು ಅಗಣಿತ ॥ ಅವನುವೆಂಕಟಗಿರಿಯೊ
ಳಗೆವಾಸವಾಗಿರುತಿರುವ । ಅವನಿಗೆನಿನ್ನ ಮಗಳನುಕರು
ಣಿಸಂಮ್ಮೈಯ್ಯ । ಅವನಿಗೊಡತನವಂದುತೃಣವೆಂದುತಿ
ಳಿಯಮ್ಮಯೆಂದು ಬೋಧಿಸಿದಳುಬಕುಳೆ ॥೩೫॥ ಇತ್ತ
ಗೋವಿಂದನೆನೆದನು ವಂದುಕಾರ್ಯವನು । ಪೃಥ್ವಿಯೊಳು
ಒಂದುಸಂದಿಯುಅಲ್ಲವೆನುತ । ಚಿತ್ತಜನಪಿತನು ಕೊರ
ವಂಜಿರೂಪವತಾಳಿಬಂದುಕಣಿಯನ್ನುಹೇಳಿದ । ಮತ್ತೇ
ಭಗೆಮನೆಪದ್ಮಾವತಿಯು ವೆಂಕಟಗೆ ಚಿತ್ತಸಂಭ್ರಮದಿಂ
ದಕೊಡುಯೆಂದುಹೇಳುತ್ತ । ನಿತ್ಯಸಂಪೂರ್ಣಬಂದನು
ತನ್ನಸ್ಥಾನಕ್ಕೆಬಕುಳೆಬಂದಳುವೇಗದಿ। ಕಾರ್ಯಕ್ಕೈಗೂಡಿ
ತ್ತೈಯೆಂದುಹೇಳುವವೇಳೆ । ಧಾರುಣೀಶನು ಲಗ್ನಪತ್ರಿಕೆ
ಯುಕಳುಹಿದನು । ಶೌರಿನೋಡುತಸೂರ್ಯನಲ್ಲಿ ಪತ್ರಿಕೆಕ
ಳುಹಿಅಷ್ಟದಿಕ್ಪಾಲರೆಲ್ಲ ॥ ಗೌರಿಪತಿವಾಣೀಶ ಇಂದ್ರಧನ
ಪತಿವರುಣ । ಮಾರುತನು ಅಗ್ನಿಯಮಸಹಿತಬಂದರು
ಬೇಗ । ವಾರಿಜಾಂಬಕಿಲಕ್ಷ್ಮಿಯನು ಕರಸಿದನುಸ್ವಾಮಿ
ವೇರೆಯಿಲ್ಲದೆ ಹರುಷದಿ ॥ ೩೭ ॥ ಧನಪತಿಯೊಳಗೆಲಕ್ಷ
ಕೋಟಿಧನವತಕ್ಕೊಂಡು। ವನಜಾಕ್ಷದೇವತಾಪ್ರಸ್ತವನೆ
ರಚಿಸಿದನು । ಅನುವಾಗಿಯಲ್ಲರುಪೊರಟರುಸಂಭ್ರಮದ
ಲಿಂದಜನಪತಿಯಪುರಕೆಬೇಗ॥ ಬರಲುಧೊರೆನೋಡುತ್ತ
ವರಪೂಜೆಯನುಮಾಡಿ। ವರರತ್ನಕನಕಬೀಡಾರಗಳವಲಿ

ದಿತ್ತ । ಮರುದಿವಸನಾಂದಿಕಾಶೀಯರಾತ್ರೆಮಾಡಿದನು ।
ತರಳೆಯುನಕರತಂದು ॥ ೩೮ ॥ ವರಗೋತ್ರಪ್ರವರವಂ
ಗಳಾಷ್ಟಕವುಪೇಳುತ್ತ । ಗುರುನಾರದರುಪೇಳಿಯರಸಿ
ದರುಧಾರೆಯುನು । ಪರಮಪುರುಷನಿಗೆ ಪದ್ಮಾವತಿಯು
ಶೇರಿದಳುಸುರರುಪೊಗಳುತನಿಂದರು ॥ ಪರಿಪರಿಯುಬಲು
ವಳಿಯುಮನದಣೆಯೆವಲಿದಿತ್ತು । ವರರತ್ನನೂರುಭಾರದ
ಮಕುಟಅರ್ಪಿಸಿದ । ಧರಣಿಸುರರಿಗೆ ಮುತ್ತುರತ್ನಕನಕ
ವುಕೊಟ್ಟುವುಡುಗರೆಗಳನಿತ್ತಜನಕೆ ॥೩೯॥ ನಾಲ್ಕುದಿವ
ಸವುಸಲ್ಲೆನಾಕಬಲಿರಚಿಸಿದನು । ಬೇಕಾದವುಡುಗರೆಯ
ಕೊಟ್ಟನುನೃಪನು ।ಶ್ರೀಕಮಲಪತಿಯುತನ್ನರಸಿಯುನು
ವಡಗೊಂಡುಪರ್ವತಕೆಬಂದಸ್ವಾಮಿ ॥ ಏಕಚಿತ್ತದಭಕ್ತ
ತೊಂಡಮಾನನಕರಿತು। ಯಾಕಯ್ಯತಡವ್ಯಾಕೆಮಂದಿ
ರವಮಾಡೆನೆ । ಲೋಕದೊಳಗತಿರಚಿಸಿದನು ಮಂದಿರವ
ಶ್ರೀಕೃಪಾಸಾಗರನಿಗೆ ॥೪೦॥ ಬ್ರಹ್ಮದೇವರುಬಂದುಸ್ವಾ
ಮಿಯೆದರಿನಲಿನಿಂದು। ನಮ್ಮಸ್ವಾಮಿಯೆಕೇಳೋಈಕಲಿ
ಯುಗದಲ್ಲಿ । ಬ್ರಹ್ಮೋತ್ಸವವುಕನ್ಯಾಮಾಸ ಶುದ್ಧದಶ
ಮಿದಿನದಿಮಹದುತ್ಸಗಳು ॥ ಬ್ರಹ್ಮಾಂಡನಾಯಕನಕೈ
ಕೊಳ್ಳುಯೆಂದೆನುತ । ತಮ್ಮರೂಪವಮಾಡಿಕೊಳುವೆಂ
ದುಪೇಳಿದನು। ನಮ್ಮಭಕ್ತನೆತೊಂಡಮಾನಕೇಳೈಯೆಂ
ದುವಮ್ಮೆಪೇಳುವೆಮಾತನು ॥೪೧॥ ಇಂದುನಿನ್ನಯಕೊ
ಡೆಮಾತನಾಡಿದೆಕೇಳು । ಮುಂದೆಕಲಿಯುಗಬಂತು ಬಂ
ದುದೈನೋಡೀಗ । ಮಂದಹಾಸದಿಮೌನದಲಿ ಪೂಜೆಯ

ನುಗೊಂಡುಬೇಡಿದವರಗಳಕೊಡುವನು ॥ ಯೆಂದುಪೇಳುತಶ್ರೀಶನಿಂದದೇವಾಲಯದಿ । ಚಂದದಿಂಕಾಸುಕಾಸಿಗೆ ಬಡ್ಡಿತೆರಸುವನು । ಮಂದರೋದ್ಧರನು ಕಾಣಿಕೆಪ್ಪತ್ರರಿಸುತ್ತ್ರಭಕ್ತರನುರಕ್ಷಿಸುವನು ॥೪೨॥ ಜನಕರಾಜನಿಂದರ ಗುರುಶತಾನಂದನರು । ವರ್ಣಿಸಿದಪರಮಪಾವನಕಥೆಯನಾಪೇಳಿದನು । ಘನವಾದಹರಿಯಮಹಿಮೆಶೌನಕಾದಿಗಳಕುರಿತು ॥ ಭೋಗೀಶನಯನಭಕ್ತ ಸೂತಮುನಿಪೇಳಿದರು। ವಾಗೀಶರುದ್ರಾದಿಗಳಿಗೆಅತಿಶಯವೆಂದು। ರಾಗದಿಂ ವರ್ಣಿಸಿದಹರಿಮಹಿಮೆಮೂರ್ಲೋಕಕೆತಿಶಯಗಳು॥೪೩ ಅರುಣಪುದಯದಿಯೆದ್ದುನರರುಈಕಥೆಪೇಳೆ। ದುರಿತದುರ್ಗತಿಗಳನುಕಳನುಕಳಿಯುವರು ನಿಮಿಷದಲಿ । ಪರಿಪರಿಯಬೇಡಿದಿಷ್ಟಾರ್ಥವನು ಕರುಣಿಸುವವರ ಪುತ್ರನುಕೊಡುವನು ॥ ತರುಣಿಯರಿಗೆಲ್ಲಸೌಮಂಗಳವನಂಪತ್ತುಶಿರಿಯಭಾಗ್ಯವುಕೊಡುವ । ದೇವದೇವಾಧೀಶಚರಣಪದವಿಯಕೊಡುವಚಂಪಕಾಪುರವಾಸತಿರುಪತಿವೆಂಕಟೇಶ ॥

ಮಂಗಳವು ಮುರಹರಗೆ । ಮಂಗಳವುಶ್ರೀಪತಿಗೆ । ಮಂಗಳವುವೈಕುಂಠದೊಡೆಯ ಶ್ರೀಹರಿಗೆ । ಮಂಗಳವು ಪದ್ಮಾವತಿಯವಲ್ಲಭಗೆ । ಜಯಮಂಗಳವುಶೇಷಾದ್ರಿವಾಸವೆಂಕಟೇಶಗೆ । ಜಯಮಂಗಳಂನಿತ್ಯಶುಭಮಂಗಳಂ॥

ಉದಯರಾಗ.

ಭಯನಿವಾರಣವು। ಶ್ರೀ[illegible]ರುನಾಮ। ಜಯಪಾಂಡುರಂಗವಿಠಲನಿಮ್ಮನಾಮ। ಧಾರುಣಿ[illegible]ಗಾಧಾರನಾ

ಗಿಹನಾವು । ನಾರದರುನಲಿನಲಿದುನೆನೆವನಾವು ಘೋರ
ರಾತ್ರಕಿಯಾದಜಾಮಿಳನ ಸಲಹಿದನಾವು । ತಾರಕಾಬ್ರ
ಹ್ಮವಲ್ಲವೆನಿಮ್ಮನಾವು ॥ ಮೊರೆಯುಲಾಪಿಸಿಮುನ್ನಜಗವ
ಸಲಹಿದನಾವು। ಕರುಣದಿಂದ್ರೌಪತಿಯಕಾಯ್ದನಾವು
ದುರುಗುತಿಹಧ್ರುವಗೆ ವುನ್ನತವಮಾಡಿದನಾವು । ಪರಕೆ
ಪರತತ್ವವಲ್ಲವೆನಿಮ್ಮನಾವು ॥೨॥ ಚರಣದಲಿಅಹಲ್ಯೆಯ
ದುಶೆರೆಯಬಿಡಿಸಿದನಾವು । ಮುರಹರಾ ಯುನ್ನಲಂಬರೀ
ಷನಕಾಯ್ದನಾವುಪರಕೆಪರತತ್ವವಲ್ಲವೆನಿಮ್ಮನಾವು। ಭ
ಯುನಿವಾರಣವುಶ್ರೀಹರಿಯು ॥೩॥ ಚಂದ್ರಶೇಖರಗಿರಿಜೆಕ
ರಣಶರಣೆಂಬೊನಾವು। ಬಂದವಿಭೀಷಣನಕಾಯ್ದನಾವು
ಕಂದಮುಚುಕುಂದನಿಗೆಕಾಮಿತಾರ್ಥವಿತ್ತನಾವು।ಪಾಂ
ಡವರಪಕ್ಷವಲ್ಲಭನಿಮ್ಮನಾವು । ಭಯುನಿವಾರಣವು ॥೪॥
ಅಖಿಳದೇವಪುರಾಣಅರಸಿಕಾಣದನಾವು । ಸಕಲಯೋಗೀ
ಜನಕೆಸೌಖ್ಯನಾವು । ಪ್ರಕಟಿಸಲುಜಗವಪಾವನಮಾಡಿ
ದನಾವು । ರುಕ್ಮಿಣೀಗರಸವಿಟಲನಿಮ್ಮನಾವು। ಭಯುನಿ
ವಾರಣವು ॥೫॥ ಕಡಹದಮರನೇರಿ ಮಡುವುದುಮಿಕಿದ
ನಾವು । ಹೆಡೆಯಕಾಳಿಂಗನಾತುಳಿದನಾವು ॥ ಮಡದಿ
ಯರಗೊಲಿದುಪಾವನಮಾಡಿದನಾವು। ಪರಕೆಪರತತ್ವವ
ಲ್ಲವೆನಿಮ್ಮನಾವು ॥೬॥ ಕಮಲಮುಖಿ ತುಲಸಿಯುನುಕರು
ಣಿವಲ್ಲಭನಾವು । ಕಾವೇರಿಮಧ್ಯದಲಿನೆಲಸಿದನಾವು। ಕ್ಷೀರ
ಸಾಗರಪಲ್ಲಿಶಯನವಾಗಿಹನಾವು । ಧಾರುಣಿಯೊಳಧಿಕ
ವಲ್ಲವೆನಿಮ್ಮನಾವು ॥ ಭ ॥೭॥ ಭಕ್ತಿಯುಲಿನೆನೆವಗೆಯೆ

ತ್ರಿಸಲಹುವವನಾವು । ಮುಕ್ತಿಮಾರ್ಗಕೆಯೋಗ್ಯ ಶ್ರೀ
ಹರಿಯನಾವು ॥ ಹೆಚ್ಚರಿಕೆಸ್ವಾಮಿಪರಾತ್ಮವಲ್ಲವೆನಾವು
ಚಿತ್ತಜನಪಿತ್ತಶ್ರೀಹರಿಯನಾವು ॥ಛ॥೪॥ ನಂಬಿದಭಕ್ತ
ರನುಬಂದುಸಲಹಿದನಾವು । ತಂದುಅಮೃತವನುತಂದ
ರದನಾವು । ಅಂದುಧ್ರುವನಂಬರೀಷನ ಜಾಮಿಳನಸಲಹಿ
ದನಾವು । ವರಪುರಂದರವಿಠಲನಿಮ್ಮನಾವು ॥ಛ॥೯॥

ಕೃಷ್ಣೇತಿಮಂಗಳಂನಾಮಹರಿಯೆ । ಇಷ್ಟದಲಿಬ
ಹುಬಂಧನವ ನಷ್ಟವಾಗಿಹೋಯಿತಣ್ಣ । ಕೃಷ್ಣೇತಿ
ಮಂಗಳಂನಾಮಹರಿಯೆ । ಅಜಾಮಿಳನುಈನಾಮಅಂತ್ಯ
ಕಾಲದಲಿಸ್ಮರಿಸಿ । ನಿಜಪದವಿಯೇರಿದನುನಿಮಿಷದೆಂದಾ।
ಭುಜಗಭೂಷಣತನ್ನಶ್ರೀರಾಮನಾಮವತಂದು।ನಿಜಕಾಂ
ತೆಯನುಕರೆದು ಉಪದೇಶವನುಕೊಟ್ಟ। ಕೃಷ್ಣೇತಿಮಂ
ಗಳಂನಾಮಹರಿಯೆ ॥೧॥ ನಾರದಮುನಿತಾನುನರಕಪಟ್ಟ
ಣಕೋಗಿ । ವಾರಿಜನಾಭನೆಂದುಸ್ಮರಿಸಿದಾವಾಗ ಘೋರ
ನರಕಗಳೆಲ್ಲ ಹಾಳಾಗಿಹೋಯಿತು । ಸೂರೆಗೊಂಡುದು
ಸ್ವರ್ಗಹರಿಯೇ ॥ಕೃಷ್ಣೇತಿ॥೨॥ ಹಿರಣ್ಯಕಶ್ಯಪತನ್ನಮ
ಗನಬಾಧೆಯಪಡಿಸಿ । ಗಿರಿಗುಹಂಗಳ ದೊಳಗೋಡ್ಯಾಡ
ಲು। ನರಹರಿಯೆರಕ್ಷಿಸೆಂದಾಕ್ಷಣಕೆ । ನರಸಿಂಹರೂಪದಿಂ
ದವನಸಲಹಿದನಾವು॥ಕೃಷ್ಣೇತಿ॥೩॥ ಧ್ರುವನುತಂದೆಯ
ತೊಡೆಯಮೇಲೆಕುಳ್ಳಿರಲಾಗಿ। ಅವನಬಲತಾಯಿವರ್ಜಿಸಿ
ದಳಾವಾಗ। ಸಿರಿಸುಹಂಗಳಬಿಟ್ಟುಹರಿಸ್ಮರಣೆಗೈಯ್ಯಲು
ಚೆಲುವಾದಪದವಿಯನುಕೊಟ್ಟಈನಾವು ॥ಕೃಷ್ಣೇತಿ॥೪

ಜಲದೊಳಗೆಮುಳುಗಿ ಕರಿಯುನೆಗಳುಬಾಧೆಗೆಶಿಲ್ಕಿ । ಗಜ ರಾಜವರದನೆಂದೊರಳಿದಾವಾತ । ಸಿರಿಗೆಹೇಳದಬಂದು ಕರಿಯುಕಾಯ್ದ್ಯಾದೇವ । ಗಜರಾಜವರದನೆಂದೆನಿಸಿಕೊಂ ಡಿಹನಾಮ ॥ಕೃಷ್ಣೇತಿ॥೫॥ ಪಂಚಪಾಂಡವರನುಪಾಲಿ ಸಲುಇನಾಮಪಾಂಚಾಲೆಮೊರೆಕೇಳಿಶೆರೆಯುಬಿಡಿಸೀ। ವಂ ಚನೆಯುನುಮಾಡಿ ಕೌರವರನೆಲ್ಲರನುಕೆಡಹಿ । ನಿಶ್ಚಿಂತೆ ಯುಲಿಪಾಂಡವರಿಗೆಪಟ್ಟಗಟ್ಟಿದನಾಮ ॥ಕೃ॥೬॥ ಪರಿಪರಿ ಯಭಕ್ತರನುಪಾಲಿಸಲು ಈನಾಮ । ಪರಮಪಾವನವು ಮಂಗಳವುನಾಮ । ಸಿರಿಯುಬ್ರಹ್ಮಾದಿಗಳು ಸ್ತೋತ್ರ ಮಾಡುವನಾಮ । ವರಪುರಂಧರವಿಠಲನಿಮ್ಮನಾಮ। ಕೃಷ್ಣೇತಿಮಂಗಳಂ ॥ ... ... ॥೭॥

ಗೋವಿಂದಾನಮ್ಮ ಗೋವಿಂದಾನಮ್ಮ । ಗೋವಿಂ ದಾನಮ್ಮನಾರಾಯಣಾಗೋವರ್ಧನಗಿರಿಯನೆತ್ತಿದಗೋ ವಿಂದಾನಮ್ಮರಕ್ಷಿಸೋ ॥ಪ॥ ಪಡಲುಹಾಸಿಗೆಪಡಲುಬೆನ್ನ ಲಿಬಾರಳು । ಕಡೆಯುಮನೆರುಯೆಳೆದು ಹೊಯ್ವಾಗತೊ ಡಲಿಬಿದ್ದುದನಾಲಿಗೆ ಗೋ ॥ ಅರ್ಥವ್ಯಾರಿಗೆ ಪುತ್ರರ್‍ಯಾರಿ ಗೆಮಿತ್ರಬಾಂಧವರ್‍ಯಾರಿಗೆ । ಕರ್ತೃಯುಮನೆರುಯೆಳೆದು ಹೊಯ್ವಾಗಹೊತ್ತುಬಿದ್ದುದುನಾಲಿಗೆ ॥ಗೋವಿಂದಾನ ಮ್ಮ॥೧॥ ಮಂಚಬಾರದುಮಡದಿಬಾರದುಕೆಂಚಕನ್ನಡಿಬಾ ರದು । ಸಂಚಿತಾರ್ಥದ್ರವ್ಯಬಾರದು ಮುನ್ನಮಾಡಿದಧ ರ್ಮವಾ ॥ಗೋ॥೨॥ ಪ್ರಾಣದೊಲ್ಲಭತನ್ನಪುರುಷನ ಕಾಣದೆ ನಿಲ್ಲಲಾರಳು । ಪ್ರಾಣಪ್ರೋಕ್ಷೂವಾಗಮುಟ್ಟಲೊಲ್ಲಳುಜಾ

ಣೆಕರದರೆಬಾರಳು ॥ಗೋ॥೪॥ ದಿಟ್ಟತನದಲಿಪಟ್ಟಆಳುವೆ
ಕೆಟ್ಟುಕೋಯುತ್ತು ಪದವಿಯಾ । ಮುಟ್ಟಿಭಜಿಸಿರೋವರ
ಪುರಂದರವಿಠಲೇಶನಪಾದವಾ ॥ ಗೋ ॥ ॥೫॥

ಹರಹರಾಗೋವುನಾನು । ಹುಂಕರಿಸಿ ಕಂಡಬಾಗಿಲಿ
ಗೆಬಂದರೆ । ಧ್ವನಿಯುಕೇಳೀನಾನುಧನ್ಯಳಾದೆ। ಅಂಬಿದ್ದ
ಕರದರೆಆಕಳವುನಾನಾದೆ। ನೀನಾರಿಗಾದೆಯೋಯುಲವೂ
ನವಾಹರಹರಾ ॥೧॥ ಹಾದಿಯಾಬೀದಿಯಾಕಸವನೇರಿಸಿ
ತಿಂದು । ಮನೆಗೆಬಂದೂನಾನುಅಮೃತವೆಕರವೆ । ನನ್ನ
ಅಮೃತವನುಂಡುನನಿಗೆರಡುಬಗೆದಂತ । ಇಂಥದುಷ್ಕ
ರ್ಮಪಾಪಿಗಳಿಗಿನ್ನೇನೆನ್ನಲೀ ಹರಹರಾ ॥೨॥ ಕೆಟ್ಟದಹಗ್ಗ
ವನುಬಿಚ್ಚಿಕೊಳ್ಳ ನಾನರಿಯೆ । ಇತರರೊಬ್ಬರಕೂಡೆವು
ಸುರಲರಿಯೆ । ಈಮೂರುಲೋಕಕ್ಕೆಭಾಗೀರಥಿನಾನಾದೆ ।
ನೀನಾರಿಗಾದೆಯೋಯುಲೆಮಾನವಾ ॥ ಹರಹರಾ ॥೩॥ ವ
ಟ್ಟದರೆಸಗಣಾದೆತಟ್ಟದರೆಬೆರಣಾದೆ। ಸುಟ್ಟರೆನೊಸಲಿಗೆ
ವಿಭೂತಿಯಾದೆನೋ। ಭೂತಪ್ರೇತಂಗಳಿಗೆಕಾವುರಕ್ಷೆಗ
ಳಾದೆ । ನೀನಾರಿಗಾದೆಯೋಯುಲೆಮಾನವಾ ॥ ಹರಹರಾ॥
ಕರದರೆಹಾಲಾದೆ ಕಡದರೆಬೆಣ್ಣ್ಯಾದೆ । ಕಾಸಿದರೆತುಪ್ಪದೀ
ವಿಗೆಯಾದೆನೋ । ದೇವರಮುಂದಣನೈವೇದ್ಯಕ್ಕೆನಾನಾ
ದೆ। ನೀನಾರಿಗಾದೆಯೋಯುಲೆಮಾನವಾ ॥ಹರ॥೫॥ ಕರು
ವುಸತ್ತರೆಯನ್ನತಿರಿಗಿನೋಡುವರಿಲ್ಲ । ಮೊರವುತಂದೂ
ಯನ್ನಮುಂದೆಹಾಕುವರು। ಸತ್ತಕರುವನುತಂದುಮುಂ
ದಿಟ್ಟುಕರವರು। ಇಂಥದುಷ್ಕರ್ಮಪಾಪಿಗಳಿಗಿನ್ನೇನೆನು

ತ್ರಲೀ ॥ ಹರ ॥೬॥ ರಾಯಂಗೆಕೊಂಬಾದ ರಾಯರಿಗೆಹಲಿ ಗ್ಯಾದೆ । ಗಿಡಮುಂಡಿತಾಳತಮ್ಮಟವಾದೆನೋ । ನಡವರ ಕಾಲಿಗೆಹಾದರಕ್ಷೆಗಳಾದೆ। ನೀನಾರಿಗಾದೆಯೋಯಲೆಮಾ ನವಾ ॥ ಹರಹರಾಗೋವುನಾನು ॥ ... ॥೭॥

ಹಕ್ಕಿಚಿಲಿಪಿಲಿಯನ್ನಲೀ । ರಂಗಾಕಾಕಿಕಾಕಾಯನ್ನ ಲೀ। ಹರಿಯೆಗೋಗಿಲೇ ಸ್ವರಗ್ಳ್ಯೈಯ್ಯೇಲೀ । ರಾಮಾನಾಗ ಸಂಪಿಗಹರಳಲೀ । ಕೃಷ್ಣಾಭಾನುವುದಯವಾಗಲೀ ॥ಪ॥ ಯೆದ್ದುಮುಖತೊಳಿಯೋಳು । ತಿದ್ದಿಕಸ್ತೂರಿತಿಲಕಮು ದ್ದುಬೆಣ್ಣೆಯನಿನಗೆನಾನುಕೊಡುವೆ। ಹೊದ್ದಿದಕತ್ತಲು ಬೆಳಕುಹರಿಯಲೊರಂಗಾ । ನಿದ್ರೆತಿಳಿದೆದ್ದು ನೀನೆದ್ದು ಕುಂಡ್ರೈಸ್ವಾಮಿ ॥ ಹಕ್ಕಿ ॥೧॥ ಬಿಸಿಯದೋಸೆಯಹೊ ಯ್ದು ನೊಸರುಗಡ್ಡೆಯತೆಗದು । ಹಸನಾದಹಸಿವಿನಾ ತುಪ್ಪವನ್ನೂ ಹಸನಾದಕಲಸನ್ನಹೆಸರುಬ್ಯಾಳಹುಗ್ಗೀ । ಹಸುಳೆನಿನಗಾರೋಗಣೀಕೃಷ್ಣಾ ॥ ಹಕ್ಕಿ ॥೨॥ ಯೆಂದು ಯಿಲ್ಲದಪೋರುಇಂದ್ಯಾಕೆಮಾಡಿದೆಯೊ ಕಂದರೊಳಗತಿ ಹುಟ್ಟಿಆದೆನೀನು। ಇಂದುನೆರಳಿಗೆನಿನ್ನ ಯೆತ್ತಿಕೊಳ್ಳುವ ರಿಲ್ಲಕಂದ । ಅಳುಬ್ಯಾಡಮ್ಮೆಯ್ಯ ಶ್ರೀಪುರಂದರವಿಠಲ॥೩॥

ಏಳುಸುಬ್ರಹ್ಮಣ್ಯಾ । ಏಳುಫಣಿರಾಯನೇ । ಏಳುಕು ಕ್ಕೆಯದೊಳಗೆನೆಲಸಿದಾಪುರವಾಸ । ಯೇಳಯ್ಯಬೆಳಗಾ ಯಿತು ॥ಪ॥ ಎಂಭತ್ತುನಾಲ್ಕುಸಾವಿರಲಕ್ಷಜೀವಗಳುಬಂ ದು। ಕುಮಾರದಾರೆಯೋಳ್ಸ್ನಾನವನುಮಾಡಿ । ಅಂಗ ಪ್ರದಕ್ಷಿಣೆಯುಮಾಡಿನಿಂತಿದ್ದಾರೆ । ತಂದೆನೀನೇಳಯ್ಯ

ನುತಲಿ । ಸುಬ್ಬಾಯೋಳೈಬೆಳ ॥ ೧ ॥ ಭಕ್ತರನುಪ್ರೊರೆದು ಪಾಲಿಸಿ ಕರುಣದೊಳಗಿಂಬಿಟ್ಟು ಸಲಹುವವ ಮುಕ್ತಿಯು ಕೊಡುವ । ಚಿತ್ತಜನನೀನೇಳುಯನುತಲಿ ಸುಬ್ಬಾಯೋ ಳಯ್ಯಬೆಳಗಾಯಿತು ॥ ೨ ॥ ದಾನಗಳುಕೊಡುವಕರುಣಾ ಬ್ಧಿಯೆದ್ದನೋನೋಡಿ । ಬೇಡಿದವರಗಳಕೊಡುವಸ್ವಾ ಮಿಯೆದ್ದನೋನೋಡಿ । ಆರಾರಮನದ ಅಭೀಷ್ಟಯಂ ಸಲಹುವಅನ್ನದಾನಫಣಿಪತಿಯೆದ್ದನೋನೋಡಿ ॥೩॥

ನಿನ್ನಾ ಮಗನಲೂಟಿಘನವಮ್ಮಾ। ನೀಕರದುಕೃಷ್ಣ ಗೇಬುದ್ಧಿಪೇಳೇಗೋಪಮ್ಮಾ ॥ನಿನ್ನಮಗ॥ ಪ ॥ ಪಶುಗಾ ಳುಕರಾದಲೀಪಾಲೀಗೆವುಳುವಿಲ್ಲ । ಶಿಶುಗಳಕೈಲಿದ್ದಬೆಣ್ಣೆ ಗೆವುಳೂವಿಲ್ಲ । ಮುಸುರುಮಾರುವಲ್ಲಿಮಾರಿಹೊಕ್ಕಂದಾದಿ ಶಶಿಮುಖಿಯರುದೂರಿಡುವರಮ್ಮಾ ॥ನಿನ್ನಮಗ॥೧॥ ಮಲ ಗಿದ್ದಸತೀಯಪಾರೆವೊಲೆಗಾಳತಾನುಂಬ । ಯುಳಿಯುಕೊ ಸುಗಾಳುಯೆಣಿಗೊಂಡಾವಮ್ಮಾ । ವಳಗೆಈಲೂಟಿಯು ಹೊರಗೆಆಲೂಟಿಯು । ಯೆಚ್ಚರಪಟ್ಟೇವುಕಾಣೆಗೋಪ ಮ್ಮಾನಿನ್ನಾ ॥ ೨ ॥ ಊರೋಳಾಗಿರಲೀಸ ಊರುಬಿಟ್ಟು ಹೋಗಲೀಸ । ಈರೇಳುಭುವನಕ್ಕೆವಡೆಯತಾನಂತೆ। ವಾ ರಿಜನಾಭಶ್ರೀಪುರಂದರವಿಠಲನ । ಬೀದಿಯುಬಸವನಮಾ ಡಿಬಿಟ್ಟೇಗೋಪಮ್ಮಾ । ನಿನ್ನಮಗನಲೂಟಿ ಘನವಮ್ಮಾ ನೀಕರದುಕೃಷ್ಣಗೇ ಬುದ್ಧಿಪೇಳೆಗೋಪಮ್ಮಾ ॥ ॥೪॥

ಪೂರ್ವಾರ್ಜಿತಂಗಳನ್ನು ವಿೂರಿಬಾಳುವರುಂಟೆ । ಪಾ ರ್ವತಿಯುರಮಣಭಿಕ್ಷನಬೇಡಿತಿರಿದುಂಡಾ। ಗೀರ್ವಾಣಋಷಿ

ವರರುಬಿಡದೆಕಾಡೊಳುವಿಧಿಯು । ಇನ್ನಾವದೇವರುಗೆ ಲ
ಕೈಗಂಗಾಧರಾಪೂರ್ವಾರ್ಜಿತಂಗಳನ್ನು ॥ ಪ ॥ ಹರಿಯು
ಅವತಾರವನುಬಹುದಾಯೆತ್ತಿದನು । ಸರಸಿಜೋದ್ಭವನ
ಶಿರವುಹೋಗಾಡಿಕೊಂಡನೂ । ಸುರಪತಿಗೆಶಾಪದಿಂಯೋ
ನಿಯಾಯಿತುದೇಹ ॥ ಶರಧಿಯುಲಿಖಿಷ್ಕಿಸುಟ್ಟಿತಾಶರಭಾ
ವತಾರಯೋಗದಲಿ । ದಕ್ಷನಶಿರವೈರದಿಂಕತ್ತರಿಸಿಪ್ರತಿಬ
ರವಹಚ್ಚಿಸಿದ । ಯಚ್ಛಾಪಿಶ್ರೀಕೃಷ್ಣನಂ ಸಾಲಹರಿಹರಿ
ಸುವರಾರುವಿಧಿಯುಗಂಗಾಧರಾ ॥ ೧ ॥ ಮುಷ್ಟಾಣವನು ಕಾ
ಯ್ದುಹರಿಶ್ಚಂದ್ರಚಂದ್ರಾಪತಿಯು । ಶಿಶುಸಹಿತಕಂಸಕಾ
ಲಾಳಿಗೆತೊತ್ತಾದರು । ಪಶುಪತಿಯುಉರಿಗಣ್ಣಿಂದಭಸ್ಮ
ವಾದನುಮಗನು । ವಸುದೇವರಾಸುತಾಸಹಿತ । ಶರೆಯೊ
ಳಿರ್ದ್ದಮುಸಳೆಗಜದಾಂಘ್ರಿಯನುಬಿಡದೆಬಹುಬಾಧಿಸುತ ।
ಶಶಿಧರನಸುತಿಸಹಸ್ರಜನ್ಮವನೆತ್ತಿತೊಳಲಿಡಲು । ಅಸನೂ
ಷನಸುನಗುತ ಮುಮುವೆಯಿಲ್ಲದೆಹೋಯ್ತು । ರವಿಶಶಿಗೆ
ಮರದಿಂರಾಹುತುಡುಕೆಗಂಗಾಧರಾ ॥ ೨ ॥ ಖಗರಾಜನ
ಮಾಧನವಿತಿಗೆದಾಸಿಯಾದಳು । ಭಗೀರಥನುಭಾಗೀರಥಿ
ಗಾಗಿತಪಸಿದ್ಧಹಗೆಯಾದಹರಿಯೊಡನೆ । ಹತನಾದಕಂ
ಸಾಖಗಪತಿಯುನೆಜಹಾಗದಿಂಶರಧಿಯುಪೊತ್ತ । ಅಗಜೆ
ಯಿಂದಗಲಿಬಹುಕಾಲಸಿರ್ದ್ದೈಪಿದಳು ॥೪॥ ಮೃಗಬೇಂಟೆ
ಯುಬದಿಗೆಸಿಲ್ಕಿದಳುದಮಯಂತಿ ಅಜ್ಞಾತವಾಸದೊಳು
ನಾರಾಯಣನವಾಹನಕೆನಾಕವುಡೊಂಕಾಯ್ತು । ನಾರ
ದರುಸ್ತ್ರೀಯುಜನ್ಮವನೆತ್ತಿತೊಳಲಿದರು । ಮಾರುತಾತ

ಜತನ್ನಬಾಲನುಡಿಸಿಕೊಂಡನಾರೇರಗೋಳಗಾದ । ಶೃಂಗ
ಮುನಿಯುಮ್ಮೇರುವೆಯುಸುತ್ತುವಭಾರ। ರವಿಯುಸಾರಥಿ
ಹೇಳುವವೇಳೆವಾರುಧಿಯು ಕಟ್ಟನೊಳುಬಂಧಕ್ಕೊಳಗಾ
ಯ್ತು । ಸುರಪನಂದನನುದಂತಹೀನನು ॥ ಪುರುಷಮೃ
ಗಮುನಿಯುಗಡಗೈಸೆ ಭೂಮಿಜಯುಸಹಿತಾ । ಶ್ರೀರಾ
ಮವನದೊಳಗಿದ್ದ ಕಾಮಿಸಿದರಾವಣನು । ಸೀತೆಯನು
ಕೊಂಡೊಯ್ದು ವಾಮನವತಾರದಲಿ । ಬಲಿಯುಬಂಧನ
ವಾಯ್ತುನಿರ್ಧೂಮವಾದವಾಲಿ । ಹೋಮವನುಬಹು
ಮಾಡಿಸರ್ಪವಾದನು । ನಹುಷನೇಮದಲಿಧರ್ಮರಾಯರು
ಕೆಂಕರಾದರು । ಭೀಮಬಾಣಸಿಯಾದಪಾರ್ಥಹೆಣ್ಣಾದ ॥
ಆಮಹಿಮೆಸಹದೇವಕರುವಕಾಯ್ದ । ಘಾತಕನುದುಶ್ಶಾ
ಸದ್ರೌಪದಾತ್ಮಜೆಯುಬಂಧಿಸಿದ । ಸೀತೆಗೋಸ್ಕರವಾಗಿ
ರಾವಣನುಹತವಾದ । ನಾತುರದಿದ್ರೌಪದಗಳಿಕಿಕೀಚಕ
ಮಡಿದನೂ ॥೪॥ ಮಾತೆಯನುಶಿರವರಿದಪರಶುರಾಮಘಾ
ತಕನು। ಶಿಶುಪಾಲಮಾಧವನಬಂಧಿಸಿದ। ನೀತಿಯುಲಭೂ
ಮಿಯನುಕೊಡದೆ ಕೌರವಕೆಟ್ಟ । ಯಾತನೆಗೆವಳಗಾದ
ಮಾತಂಗಿಯೊಳಜಾಮಿಳನು । ಖತಿಯಿಂದಋಷಿಜಪಿಸಿ
ಅಹಲ್ಯೆಸಿಲೆಯಾದಳು । ವಾತಾಪಿಜೀರಣವಾದನು । ರೇ
ಣಾಂಕದೇವಿಗಂಡನಕೊರಳುಕೊಯಿಸಿದಳು । ತ್ರಾಣವಿ
ಲ್ಲದೆಪುರುಷಾಮೃಗವುಕಟ್ಟನೊಳಗಾಯ್ತು । ಬಾಣಾಸು
ರನತೋಳಚಕ್ರಧರಖಂಡಿಸಿದ । ದ್ರೋಣಸುತ ವ್ಯಾಧಿ
ಯಲಿಕಷ್ಟಪಟ್ಟ ॥೫॥ ಪತಿಶಾಪದಿಂಗಂಗೆಶಾಂತನೊಡ

ಗೂಡಿದಳು । ಪ್ರಾಣವನಃಹೋಗಾಡಿಕೊಂಡಾಅರ್ಜುನನು ಏಣಾಂಕವಿರಹದಲಿ ಗುರುಪತ್ನಿಗಳುಕದನುಷ್ಟೋಣಿಯು ಲಿ। ಮಾಂಡವ್ಯಶೂಲವನುಯೇರಿದನು । ಕಾಣಬಾರದುನ ಯನಧೃತರಾಷ್ಟ್ರ ॥ ಧೃತರಾಷ್ಟ್ರನಾಸತಿಯುಹೋ ತನಸತಿಯಾದಳು । ಪತಿರಯುತಾರಕಾದೇವಿರತಿಗೂಡಿ ದಳು । ಸತಿಯುವಿಂದ್ಯಾವಕೇಳಿಸತಿಭಕ್ತಿಯೂದಳು ಪಿತಗೆ ಶತೃವಾದಪ್ರಹ್ಲಾದನು ॥೭॥ ಷಡುಚಕ್ರವರ್ತಿಷೋಡಶ ಮಹಾರಾಯರು ಪೊಡಪಿಗಸ್ತಿರವೆಂದುಮುಕ್ತರಾದರು ಹಿಂದೆ। ವಡನೆದಿಕ್ಪಾಲಕರುನವಗ್ರಹಾಕಾರಿಗಳುನಡದದಿ ನವನೆಕಡದರು । ಷಣ್ಮುಖನುತಾಯಃವಾಕ್ಯವಮೀರಿಸರ್ಪ ನಾದನು॥ ಮಿಡಿಕಿಬೇಡವೃತ್ತಿಕ್ರಿಷ್ಣಮೃಗದೊಳಗೆಜ ನಿಸಿದನು । ಮೃಡನವಾಹನಕೆತೃಣಪ್ರಾಪ್ತಿಯಾಯಿತು ಕಡಲೊಳಗೆದ್ವಾರಕಿಯು ಕದಲಿತಾಷ್ಣಣದಿ ॥ ೮ ॥ ಅತ್ರಿ ಭಾರದ್ವಾಜವಾಲ್ಮೀಕಿಗೌತಮನು।ಮುಖಸತ್ಯಾನಿಧಿಯು ಗುರುಶುಕಕಶ್ಯಪನು ಶಾಂಡಿಲ್ಯಕಣ್ವರುಷಿಯು । ಅತಿಶ ಯದವಶಿಷ್ಠವಿಶ್ವಾಮಿತ್ರಜಮದಗ್ನಿ ॥ ಕೃತಕರ್ತವ್ಯಾಧಿ ಸುತಸಂಪನ್ನಾದಿಗಳಿಗೆಲ್ಲ ಗತಿಗೆಡಿಸಿಬಿಟ್ಟಿತು। ನರರಪಾ ಡಿನ್ನೇನುಕ್ಷಿತಿಯೊಳಗೆದೊಡ್ಡದೆ। ನಿಮ್ಮಚರಣದೊಳಗಿಂ ಬಿಟ್ಟುಕೋಗಂಗಾ ॥೯॥ ಹರಿಹರಬ್ರಹ್ಮತ್ರೈಮೂರ್ತಿವಿ ಶ್ವರೂಪುನೀನಾದೆ । ಹರುಷದಿಂದಸೃಷ್ಟಿಸ್ಥಿತಿಲಯಕೆಕ ರ್ತೃನೀನಾದೆ । ಹರನೆಗತಿಯಿಂದಿರುವೊಭಕ್ತಗೆ ಭಯ ವುಂಟೆ । ನಿಮ್ಮಚರಣಸೇವಕನನ್ನುನಾಸ್ಮರಣೆಕೇಳಿಕೇಳಿ

ರಲು ॥ ಉರಗರೋಷದಿಬರೆಯೆ ಧರೆಯುಮೇಲೊರಗಿದವ
ನೆಪಹರಿಸಿದೆ । ವರಕಕೊಡ್ಗಿರಿವಾಸ ಗಂಗಾಧರೇಶ್ವರಾನಿ
ಮ್ಮಚರಣದೊಳತಂಡಿಟ್ಟುಕೋ ಗಂಗಾಧರಾಪೂರ್ವಾರ್ಜಿ
ತಂಗಳನ್ನು ॥ ... ... ॥೧೦॥

—(ದ್ರೌಪದಿಯ ಉದಯರಾಗವು.)—

ವಾಸುದೇವಾಯನ್ನಮೋ । ವಾಸುಕೀಶಯನಾಯ
ವಾಸವಾದ್ಯಖಿಳಮುನಿಸನ್ನುತಚರಣಾಂಭೋಜ । ಭೂಸು
ರಪ್ರಿಯಮುನಿಪೋಷಕನೆರಕ್ಷಿಪುದು ಕೇಶವನೃಸಿಹ್ಮನೊ
ಲಿದುಪವಡಿಸಿದಾ ॥ಪ॥ ಸುಂಡಾಲಪುರದೊಳಗೆದುರುಳದು
ರ್ಯೋಧನನು । ಪಾಂಡುನಂದನರೊಡನೆ ಕಪಟದ್ಯೂತವ
ನಾಡಿ। ಗಂಡರ್ಯೈವರಮುಂದೆದ್ರುಪದಸುತೆಯ ಶಿರಗಲಂಡ
ದುಶ್ಶಾಸಪಿಡಿದು । ಅಂಡಳದುಶೀರೆಯನು ಸೆಳೆಯುತಿರೆ ।
ದ್ರೌಪದಿಯುಕಂಡು ಮನದಲಿಬೆದರಿ । ಪರಮಾತ್ಮಪರ
ಮೇಶಪುಂಡರೀಕಾಕ್ಷರಕ್ಷಿಸಯೆಂದು। ಮೊರೆಯಿಡಲುಅಂ
ಡಜತುರಂಗಬಂದ॥೧॥ ಪಾವಕನಪುರಿಯೊಳಗೆಹೊಕ್ಕು
ಹೊರಡಲಿಬಹುದು । ಹಾವುಗಳಯೆಡೆಹಿಡಿದುಯೆಳೆಯೆ
ಳೆದುತರಬಹುದು । ತುಂಬಿದ್ದಮಡುವುದುಮುಕಲಿಬಹು
ದು। ಗರಳವನುತಿವಿಸಿಕೊಳಬಹುದು । ದುರಕೆಸಾವಿಗಂ
ಜದೆಕೊರಳನುಕತ್ತರಿಸಿಕೊಳಬಹುದು। ಜೀವಯಿದ್ದಂತೆ
ಲಜ್ಜೆಯತೊರೆಯಲಾರೆನ್ನೈ । ಆವಪರಿಯಲಿನಿಮ್ಮನಂಬಿದ
ಅನಾಥಳನುದೇವ ಅಭಿಮಾನವನುಕಾಯೊ ॥ ೨ ॥ ಪತಿಗ
ಳೈವರುಸತ್ಯವ್ರತದಿಸುಮ್ಮನೆಯಿಹರು। ಅತಿಕ್ಲೇಶಪಡು

ತಿಪರುವಿದುರಭೀಷ್ಮಾದಿಗಳು । ಸುತರಮೇಲಣಮೋಹ
ದಿಂದಸುಮ್ಮನೆಯಿಹರು ॥ ಗತವಿಲೋಚನನಾದನಮ್ಮ
ವವೃತ್ರಕಾಗ್ನಿಕರು । ಶಕುನಿಕರ್ಣಾದಿಗಳು ಹಿತವಬಯ
ಸುವರಲ್ಲ । ನೆರದಿರ್ದಸಭೆಯೊಳಗೆ ಗತಿಯಿಲ್ಲದವಳಿಗೆಸ
ದ್ಗತಿಯುನೀನೆ । ನಂಬಿದೆನುರತಿಪತಿಯಪಿತನೆಕಾಯೊ ॥
ಅತ್ತೆಯಿಲ್ಲವೆಯನಗೆಗಾಂಧಾರಿದೇವಿಯುರೆ। ಮೃತ್ಯುವಂ
ತಳಸವವಬಿಡಿಸಬಾರದೆತಾಯೆ । ಉತ್ತಮಳಲ್ಲವೆಭಾನು
ಮತಿನೆಗೆಹೆಣ್ಣ ಇತ್ತದಯಮಾಡಿನೋಡೆ । ಸುತ್ತನೆರ
ದಿಹಸಭೆಯು ಪರಿವಾರದವರೆಲ್ಲ । ಹೆತ್ತೊರಿಲ್ಲವುಯನ್ನ
ಪೋಲ್ವಹೆಮ್ಮಕ್ಕಳನು । ಪತ್ತರೊಳಗೆಬಿದ್ದಹಾವುಸಾ
ಯದೆಬರಿದೆ ತತ್ವಬಾಹಿರರಾದಿರ ॥೪॥ ಅರಿಸುರಲಿದರೆನ್ನ
ದೂರುಕೇಳುವರಾರು । ಭಾರವಹಿಸುವರ್ಯಾರುಕಾಣೆನಾನಿ
ದರೊಳಗೆ । ಸಾರಿದರೆಪೊರೆವಸಂಸಾರಿನೀನಲ್ಲ। ದಿನ್ನಾರು
ಯನಗಾಪ್ತಬಂಧು ॥ ಮಾರಿಜರಧರ್ಮದೇವತೆಗೆನ್ನವಲ್ಲ
ಭರು ಭಾರನಿನ್ನದುಯೆಂದುನಂಬಿದಅನಾಥಳನು । ಷೀರ
ದೊಳಗದ್ದುನೀರೊಳಗದ್ದು ನೀನೆಗತಿಯನಗೆನಾರಾಯ
ಣನೆರಕ್ಷಿಸೋ ॥ ... ... ॥೫॥

ಋಷಿಯಶಾಪವತರಿದೆಅಂಬರೀಷನಕಾಯ್ದೆ । ವಸುಧೆ
ಯೊಳುಅಹಲ್ಯೆಯನುಕಾಯ್ದೆ । ವಸುಧೆಯೊಳುದಾನವರ
ಅಸುವಬಗೆದುರುಳಿಸಿದೆಶಿಶುಪ್ರಹ್ಲಾದಗೊಲಿದು । ವಸು
ಳಧ್ರುವರಾಯನಿಗೆಹೆಸರುಳ್ಳಪದವಿಯನಿತ್ತೆ । ದಶಕಂಠ
ನನುಜಂಗೆ ಸ್ಥಿರರಾಜ್ಯವನುಕೊಟ್ಟೆ । ಪೆಸರುಗೊಂಡರೆ

ಮಗನಅಜಾಮಿಳನರಕ್ಷಿಸಿದೆವಸುದೇವಸುತನೆಸಲಹೈ॥೬॥ ಲಕ್ಷ್ಮೀಮನೋಹರನೆಇಷ್ಟಚಾಪನಪಿತನೆ। ಯಕ್ಷಗಂಧರ್ವಅಮರೇಂದ್ರಮುನಿವಂದಿತನೆ ಅಕ್ಷಯನೆಅಭವನೆ।ಪಕ್ಷಿವಾಹನನೆಸ್ಥೂಲಸೂಕ್ಷ್ಮದಲಿಪರಿಪೂರ್ಣನೆ॥ ಕುಕ್ಷಿಯೊಳಗೀರೇಳುಭುವನಪಾಲಿಸುತಿಹನೆ। ಅಕ್ಷಯನೆಅಸುರಾಂತಕನೆ। ದಶಕಂಠಹರನೆಸರ್ವೇಶ್ವರನೆ ದಕ್ಷಸುತೆಪತಿಸಖನೆ। ಪಕ್ಷಿವಾಹನನರಕ್ಷಿಸೆನ್ನನುಅನಾಥಬಂಧೊ॥೭॥ ತಂದೆತಾಯಿಯುನೀನಬಂಧುಬಳಗವುನೀನೆ। ಇಂದೆನ್ನಕುಲಸ್ವಾಮಿಗುರುಪಿತಾಮಹನೀನೆ॥ ಎಂದುನಂಬಿದೆನಿನ್ನಮುಕುಂದನಿನಿಗೊಪ್ಪಿಸಿದೆನ್ನೈ। ಸಂದೇಹವ್ಯಾಕಿನ್ನು ಕೊಲ್ಲುಕಾಯೊನೀನುಯಂತರಡಂಗಳ ಮುಚ್ಚಿ ಕರಗಳಮುಗಿದು। ನಿಂದುಪ್ರಾಣವಬಿಡುವೆನೆಂಬು ನಿಶ್ಚೈಸಿ ಮನದೊಳು। ಗೋವಿಂದಯಂದಳುಮೃಗಾಕ್ಷಿ॥೮॥ ಇಂದೆನುತದ್ರೌಪದಿಮೊರೆಯಿಡುವದನುಕೇಳಿ। ಅಂತರಾತ್ಮಕಕೃಷ್ಣದ್ವಾರಕಾಪುರದೊಳಗೆ। ಕಾಂತೆರುಕ್ಮಿಣಿಸತ್ಯಭಾಮೆಯುರೊಡನೆ। ಏಕಾಂತಭಾವದೊಳುಕೇಳಿಕುಂತಿನಂದನರಸತಿ ಪುಟ್ಟದೊಂದೇವಸ್ತ್ರ। ಅಕ್ಷಯವಾಗಿ ಸಂತೋಷಗೊಳಲೆಂದುವರಪಿತ್ತು। ಕೃಷ್ಣಾಯೆಂತುಂಟೊಹರಿಕೃಪೆಯುಭಕ್ತರಮೇಲೆಅಸಂತವಸ್ತ್ರಗಳಾದವ್ರೊ॥೯॥ ಸೆಳೆಯುತಿದ್ದನುಖಳನುಬೆಳೆಯುತಿದ್ದವುಶೀರೆ। ಬಿಳಿವೊಂದಬಟ್ಟೆಮೊದಲಾದನಾನಾಬಣ್ಣಹೊಳಲುತುಂಬುವತೆರದಿ। ಯೆಳೆಯೆಳೆಮಹಾಪಾತ್ಮ ಬಳಲದರಮೇಲೆರಗಿದ। ಕಳೆಯು

ಗುಂದಿತುವೋರೆ ಕರ್ಣದುರ್ಯೋಧನರ ॥ ಬಳಿಯನಿಂತಿ
ರ್ದ್ದುದೊತರಕರೆದುನೇವಿುಸಿದಕಳುಹದವಸ್ತ್ರಗಳ। ಬೊಕ್ಕ
ಸಕೆಹಾಕೆನಲುನಳಿನವುುಖಿತಿಳಿದಳಾಗ ॥೧೦॥ ಶಿಟ್ಟನಲಿ
ದ್ರೌಪದಿಯುಕಣ್ದೆರದುನೋಡಿದಳು।ಜಟ್ಟದಂತೊಟ್ಟಿ
ರ್ದ್ದವಸ್ತ್ರದರಾಶಿಗಳು। ಸುಟ್ಟಗ್ನಿಹೊರಸೂಸಿಪಟ್ಟಣದಿಕೆ
ಲವುಗ್ರಹನೆಟ್ಟನಾಹುತಿಗೊಂಡುವೊ। ಕೊಟ್ಟಳೇಶಾಪ
ವನುಕವುಲವುುಖಿಕುರುಪತಿಗೆಕಟ್ಟಾಳು ಭೀಮಸೇನನರ
ಣದಿ। ವಸುಧೆಯಲಿಕುಟ್ಟಬಿಸುಟಲಿಯಿವನ ತೊಡೆಗಳೆರ
ಡುಯೆನಲುಇಟ್ಟನುಡಿಗನೃತವುಂಟೇ ॥೧೧॥ ಮೂಡಿದ
ವುಪತಿಸೂರ್ಯಧೂಮಕೇತುಗಳಾದ। ಗಗನಬೀಡಿನಲಿತಾ
ಗಾಡಿದವುಹದ್ದುಅವನಿನಡೆಗಿದದು। ಮಾತಾಡಿದವುಶಿಲೆ
ಪ್ರತುವೆನೋಡಿ ವುತ್ಪಾತವನು। ಪುರದಜನರೆಲ್ಲಕೂಡಿ
ಮಾತಾಡಿದರು। ಮುಂದೆಕೇಡುಕೌರವರಿಗೆಆಯಿತೆಂದು
ನಿಶ್ಚಯುವಮಾಡಿತಮ್ಮತಮ್ಮಗೃಹಗಳಪೊಕ್ಕರು ॥೧೨॥
ಹರುಷಪಟ್ಟರುವುನದಿ ವಿದುರಭೀಷ್ಮಾದಿಗಳು। ಸುರರು
ನಾರದಾದ್ಯರುನೆರದರುಭುದವೋಲೆ। ಹರಸಿಜಯುಜಯು
ವೆಂದುದ್ರೌಪದಿಯುಶಿರಿಮುುಡಿಗೆ। ಸೂಸಿದರುಪೂಮಳೆ
ಗಳಾ॥ ಹರಿಯನಾಮಾವಳಿಯುವೊಗಳುತಲಿದಿವಿಜೇಂದ್ರ
ತಿರಿಗಿಹೋದರುತಾವುತಮ್ಮತಮ್ಮಪಟ್ಟಣಕೆ। ಧರೆಯೊ
ಳಗೆಹರಿಯುಂನೆನವರುಯೇನುಧನ್ಯರೋ। ದ್ರೌಪದಿಯು
ಹರಿಹರಿಯುನಾಮವೇಕಾಯ್ದನುಕೃಷ್ಣಾ ॥೧೩॥ ಆವನಿ
ಪನುದಯಕಾಲದಲಿಭಕ್ತಿಯುಲಿ ಭಾವಶುದ್ಧದಿಭಜನೆಯ

ವಾಳ್ಪಸುಜನರ್ಗೆ । ಸಾವಿರಜನ್ಮದಸಂಚಿತಾರ್ಥದುಃಖ ಪತಾನೆಹತವಾದುದೆಂದು ॥ ಶ್ರೀವಾಸುದೇವನಾಜ್ಞಾಪಿಸಿ ದರುಕ್ಮಿಣಿಗೆ । ದೇವಿಕೇಳೆವ್ಮಭಾವವುಂಟೆ ಅರ್ಜುನಗೆ । ನಾನೆಸಾರಥಿಯಾಗಿಸಲಹುವೆನೆ। ಅವರನ್ನ ಜೀವಪಾಂಡವ ರೆಂದನೂಹರಿಯೆವಾಸುದೇವಾ ॥೧೪॥ ಮಂಗಳಂಶ್ರೀಧರ ಗೆಮಂಗಳಂಶಶಿಧರಗೆ ಮಂಗಳಂಕಾರುಣ್ಯನಿಧಿಗೆ । ಮಂ ಗಳಂತರಳೆಯಭಿಮಾನವನುಕಾಯ್ದವಗೆ ಮಂಗಳಂಶ್ರೀ ಯರಸಪುರಂದರವಿಠಲೇಶ್ವರನಿಗೆಮಂಗಳಂ ॥

ಹರಿಯೆಂದುಮನದಲ್ಲಿಮರದೊಮ್ಮೆನೆನದರೆ । ದುರಿ ತಪರ್ವತಗಳಖಂಡಿಪ್ರುದುವಜ್ರದಂತೆ ॥ ಪ॥ ಶತಗೋವು ದಾನವಮಾಡಲುಪುಣ್ಯವ್ರತಗಳನನುದಿನ ಆಚರಿಸೆ । ಪೃ ಥ್ವಿಯನೆಲ್ಲಧಾರೆಯನೆರೆಯಲು । ಲಕ್ಷ್ಮೀಪತಿನಾಮಸ್ಮ ರಣೆಗಳುಸರಿಯನ್ನಬಹುದೇ ॥೧॥ ಮೇರುಸುವರ್ಣದಾನ ವಮಾಡಲುಪುಣ್ಯ । ನೂರುಕನ್ಯಾದಾನವಮಾಡಲು ಧಾ ರುಣಿಯೆಲ್ಲನಧಾರೆಯನೆರೆಯಲು । ಶ್ರೀಮನ್ನಾರಾಯಣ ನಸ್ಮರಣೆಗೆಸರಿಯನ್ನಬಹುದೆ ॥ ೨ ॥ ಗಂಗೆಯಮುನಾ ಗೋದಾವರಿಕಾವೇರಿ । ತುಂಗಭದ್ರೆಯಸ್ನಾನವಮಾಡ ಲು। ಮಂಗಳಮೂರುತಿಪುರಂದರವಿಠಲನನಂಗವಸ್ಮರಣೆ ಗೆಸರಿಯನ್ನಬಹುದೇ । ಹರಿಯೆಂದುಮನದಲ್ಲಿ ಮರದೊ ಮ್ಮನೆನದರೆದುರಿತಪರ್ವತಗಳಖಂಡಿಪ್ರುದುವಜ್ರದಂತೆ ॥

ಯಾಕೆನಿರ್ದಯನಾದೆಯಲೋಹರಿಯೆ। ಶ್ರೀಕಾಂ ತಯನಮೇಲೆಯೆಳ್ಳಷ್ಟುದಯವಿಲ್ಲ ॥ಪ॥ ಶಿರಿಕೇಳದೆಹೋ

ಗಿಶಿಲೆಯನುದ್ಧರಿಸಿದೆ । ಗರುಡನಮೇಲೆಸಿಗಮನವಾದ ಭರದಿಂದಲಿಬಂದುಕರಿಯನುದ್ಧರಿಸಿದೇ। ಕರಿರಾಜವರದ ನೆಂದೆನಿಸಿಕೊಂಡೆ ॥೧॥ ಕಂಗೆಟ್ಟುಕಲ್ಲನೆಡಹಿಬೀಳುತಬಂ ದೆ। ಹಿಂಗದೆಪ್ರಹ್ಲಾದನೊಪ್ಪಿಕೊಂಡೆ । ಮಂಗಳಾಪದ ವಿತ್ತೆಭಕ್ತರಸಲಹಿದೆ । ಭಂಗಾರಮಾಷ್ಟಕೊಟ್ಟೆನೊಪೇ ಳೊಹರಿಯೆ ॥೨॥ ಅಜವಿಾಳಅಣ್ಣನೇವಿಭೀಷಣನುತಮ್ಮನೆ ರುಕ್ಮಾಂಗದ ನಿಮ್ಮಮೊಮ್ಮಗನೆ । ಅವರೆಲ್ಲಹಿತವರುನಾ ನಿನಗನುಹಿತನೆ । ಅಖಿಳಾಂಡಮೂರ್ತಿ ಶ್ರೀಪುರಂದರವಿ ಠಲ । ಯಾಕೆನಿರ್ದಯನಾದೆಯಲೊಹರಿಯೆ ॥ ॥೩॥

ನಾರಾಯಣಾಯನಬಾರದೆ। ನಿಮ್ಮನಾಲಿಗೆಯೊಳು ಮುಳ್ಳುಮುರಿದಿಹುದೆಕಲ್ಲುಜಡಿದಿಹುದೆ ॥ ಪ ॥ ನಿತ್ಯೋಉಪ ವಾಸವಿದ್ದು ಹಸಿದುಬಳಲುವದ್ಯಾಕೆ । ಮತ್ತೆಛಳಿಯೊಳು ಗಂಗೆಮುಳುಗಲ್ಯಾಕೆ । ಹಸ್ತವಪಿಡಿದುಮಾಡುವಜಪತ ಪವ್ಯಾಕೆ । ಮುಕ್ತಿಗೆಸಾಧನವಲ್ಲವೆಶ್ರೀಹರಿಯನಾಮಾ ॥ ವಾರಣಾಸಿಗೆಹೋಗಿದೂರಬಳಲುವದ್ಯಾಕೆ । ಭಾರದಾಕಾ ವಡಿಹೊತ್ತುತಿರಗಲ್ಯಾಕೆ। ಊರೂರುತಪ್ಪಿತಿರುಗಲ್ಯಾಕೆ ಊರೂರುತಪ್ಪಿದೇಶಾಂತರಹೋಗಲ್ಯಾಕೆ। ದಾರಿಗೆಸಾಧ ನವಲ್ಲವೆಶ್ರೀಹರಿಯನಾಮಾ ॥ ೨ ॥ ಸತಿಸುತರನುಬಿಟ್ಟು ಯತಿಗಳಾಶ್ರಮವ್ಯಾಕೆ । ವ್ರತನಿಷ್ಟೆಹೋಮನೇಮಗ ಳ್ಯಾತಕೆ। ಪೃಥ್ವಿಯೊಳಗೆನಮ್ಮಪುರಂದರವಿಠಲನನಾರಾ ಯಣಾಯನ್ನಬಾರದೇ ॥ ... ... ೩॥

ಮಾಧವನಿನ್ನಕರ್ಮಮರ್ಮಂಗಳ । ಈಧರೆಯೊಳಗೆಲ್ಲ

ಹೇಳಲೊ । ಸಾಧುಜನರಕೂಡೆ ಸುಮ್ಮನೆಯಿದ್ಧಯೋ । ಚಾಡಿಯುಲ್ಲರಕೊಡೆಹೇಳಲೋ ॥ಪಲ್ಲ॥ ಬೃಂದಾವನದಲ್ಲಿ ಬಂದುಬಂದುನೀನು । ಮುಂದೆನಿಂತಾಬಗೆಹೇಳಲೋ । ಮಂದಗಮನೆಯರೆಲ್ಲಜಲಕವಾಡುವಾಗ । ಶೀರೆಕದ್ದಬಗೆ ಹೇಳಲೋಮಾಧವ ॥೧॥ ನೆಂಟನಾಗಿರಥಬಂಟನಾಗಿನೀನು। ನಡೆಸಿದಬಗೆಯುಲ್ಲಹೇಳಲೋ। ವಂಟಿಯಾಗಿನೀನು ವಿದುರನಮನೆಯುಲ್ಲಿಹೋಗಿ ವುಂಡಾಸುದ್ಧಿಹೇಳಲೋ । ನೆಂಟರೊಳಗೆಸತ್ಯಭಾಮೀರಕಾಲಿಗೆಹೋಗಿ ನೆರದಸುದ್ಧಿ ಹೇಳಲೋಮಾಧವ ॥ ೨ ॥ ಅಂಗನೆಯರವ್ರತಭಂಗಾವ ಮಾಡೀದೆ । ಇಂದಿಂತವೊದಲೆಲ್ಲಹೇಳಲೋ । ಹಿಂಗಾದೆ ಕಾಲಾಯುವನಿಗೆನಾಹೋಗಿ । ಚಾಡಿಯುಲ್ಲರಕೊಡೆಹೇಳಲೋ। ಮಂಗಳಮಹಿಮಾಮುಚುಕುಂದರಾಯರಮೊರೆ ಯುಹೊಕ್ಕಾಸುದ್ಧಿಹೇಳೆಲೋಮಾಧವಾ ॥ ಶ್ರೀರಂಗನೆಂಬೊನೆರೆಯುಹಾಳ್ಯಾಗುಂಡರಂಗ ನೀತನೆಂದುಹೇಳಲೋ ಮಾಧವಾ ॥ ... ॥೩॥

ಅಚ್ಯುತಾನನಂತಗೋವಿಂದಯೆಂಬೊ ಅರ್ಥವನ್ನೆ ಕೈಯ್ಯೆಸೇರಿತು ॥ಪ॥ ಎಷ್ಟುಪುಣ್ಯಾವಮಾಡಿದೆನೋಈಗ । ಪರವಸ್ತುಯುನ್ನ ಕೈಯುಸೇರಿತೊ । ಯುಚ್ಚಾವಮಾಡಲಾಗದು । ಅದುಬಚ್ಚಿಮುಚ್ಚಿಡಲಾಗದು । ಹೊಹ್ಹಾರೆಯೆದ್ದುಕೃಷ್ಣಾಹರಿಯೆಂಬೊಮುತ್ತುಯುನ್ನ ಕೈಯುಸೇರಿತು ೧॥ ಷೀರಸಾಗರದಲ್ಲಿಅಮೃತವಕರೆವಂತಕಾಮಧೇನುಕೈಯುಸೇರಿತು । ಧೀರಕುಂತಳೆತನ್ನ ಕೈಯೊಳೊಪ್ಪುವಂಥ

ಧೀರವರಾಣಿಕಕೈಯ್ಯಸೇರಿತು ॥ಅಚ್ಯುತಾನಂತ॥೨॥ ಕೇರಿ ಕೇರಿಯಲ್ಲಿಹರಿದಾಸರುಕೂಡಿಹರಳಾನಬೆಳಗಾಣರು । ವರದಶ್ರೀಪುರಂದರವಿಠಲರಾಯನೆಂಬೊವಲವಯನ್ನ ಕೈಯ ಸೇರಿತು ॥ ಅಚ್ಯುತಾ ॥ ... ॥೩॥

ಏಳೈಯ್ಯಪಾರ್ವತೀರಮಣಪಾವನಚರಣ। ಏಳಯ್ಯ ಫಣಿಕುಲಾಭರಣಪಾವನನಯನ । ಏಳೈಯ್ಯಶರಣಜನ ಸಂಗಸದಾಪಾಂಗಏಳುನಂಜುಂಡಲಿಂಗ। ಹರನೆಏಳಯ್ಯ ಬೆಳಗಾಯಿತು ॥ಪ॥ ಕಮಲಸಂಭವಮುಖ್ಯವಿಮಲವಿಶ್ವಾಮಿತ್ರಜಮದಗ್ನಿಕಶ್ಯಪವಸಿಷ್ಠಕಣ್ವಾದಿಗಳು । ಸುಮನಸದಿಬಂದುಕಾದಿಹರೆಬಾಗಿಲೊಳೀಗ । ಉಮೆಯರಸನೀನೊಲಿದುಪ್ಪವಡಿಸ । ಹರನೆಏಳೈಯ್ಯಬೆಳಗಾಯಿತು ॥೧॥ ಇಂದ್ರಾದಿಅಮರದಿಕ್ಪಾಲರೊಂದೆಸೆಯೊಳಗೆ । ವಂದಿಸುತನಾರದರುವಲಿದುಗಾನವಮಾಡಿ ॥ ನಂದೀಶಭೃಂಗೀಶನಾರದರುನಾಟ್ಯವನಾಡುತಿಹರು ಆನಂದದಿಂಪವಡಿಸೆ ॥ ಹರನೆಏಳೈಯ್ಯ ॥ ೨ ॥ ಗರುಡಗಂಧರ್ವಕಿನ್ನರಯಕ್ಷಕಿಂಪುರುಷ । ಪರಮಪುರುಷರುನಿಮ್ಮ ಪಾದವೇಗತಿಯೆಂದುನಿರುತದಿಂಬಂದುಓಲೈಸುತಿಹರು ಏಳೈಯ್ಯ ॥ ॥೩॥

ನರಸಿಂಹಮಂತ್ರವಂದೇ । ಮಹಾದುರಿತಕೋಟಿಗಳೆಲ್ಲ । ಸಂಹರಿಸಿಭಾಗ್ಯವನೀವ। ನರಸಿಂಹಮಂತ್ರವಂದೇ ॥ಪ॥ ಹಸುಳೆಪ್ರಹ್ಲಾದನತಲೆಗಾಯ್ದುದೀಮಂತ್ರ। ಅಸುರರೊಡಲನುಬಗೆದದಿವ್ಯಮಂತ್ರ । ವಸುಧೆಯೊಳುದಾನವರಅಸುವು ಸೀಳಿದಮಂತ್ರ । ಪಶುಪತಿಗೆ ಪ್ರಿಯವಾದ

ಮೂಲಮಂತ್ರ ॥೧॥ ದಿಟ್ಟದ್ರೌಪದಿಗೆಪಟ್ಟಗಟ್ಟಿದ ಮಂತ್ರ । ಸೃಷ್ಟಿಯೊಳ್ವಿಭೀಷಣನ ಪರಮಮಂತ್ರ । ಕಟ್ಟಕಡೆಯಲಿಅಜಾಮಿಳನ ಸಲಹಿದಮಂತ್ರ । ಮುಟ್ಟಿ ಪೂಜಿಸುವರಿಗೆ ಇದುಮಹಾದೃಷ್ಟಮಂತ್ರ ॥ ೨ ॥ ಹಿಂಡುಭೂತವಕಡಿದುತುಂಡುಮಾಡಿದಮಂತ್ರ । ಚಂಡಾದಿಲೋಕಕ್ಕೆಪ್ರಚಂಡಮಂತ್ರ । ಗುಂಡುಗಲಿಕದನಪ್ರಚಂಡದಾನವರುಗಳ । ಗಂಡಶ್ರೀಪುರಂದರವಿಠಲನಿಮ್ಮಮಂತ್ರ । ನರಸಿಂಹಮಂತ್ರವಂದೆ ॥ ... ॥೩॥

—(ಮಹಾಭಾರತದ ಉದಯರಾಗವು.)—

ರಾಗ-ಭೂಪಾಳಿ ॥ ಹರಿಯೆಕ್ಷೀರಸಾಗರಶಯನನೆ ॥ಪ॥ ಅರಸಪರೀಕ್ಷಿತರಾಜಸುತನು ಜನಮೇಜಯನು । ಪರಮ ಋಷಿವೈಶಂಪಾಯನಚರಣಕೆಭಿನಮಿಸಿ । ವರಭಾರತದಕಥೆಯಹೇಳಬೇಕೆಂದೆನಲು । ಕರುಣದಿಂದಲಿನೋಡುತಾ ॥ ಸಿರಿಪತಿಯಚರಣಸ್ಮರಣೆಯಮನದಿಮಾಡುತ್ತ । ಗುರು ವ್ಯಾಸರನುಸ್ಮರಿಸಿಭಕ್ತಿಯಿಂದಲಿಸ್ತುತಿಸಿ । ಧರೆಗೆಪಾವನವಾದಕಥೆಯಹೇಳುವೆನೆಂದು ಹರುಷದಲಿವರ್ಣಿಸಿದನು॥ ೧॥ ದುರುಳರಕ್ಕಸರು ಕ್ಷತ್ರಿಯರೂಪದಿಂಜನಿಸಿ । ಪರಿಪರಿಯವರ್ಣಾಶ್ರಮಂಗಳನುಕೆಡಿಸುತ್ತ । ಧರೆಗೆಭಾರವುಕೊಡಲುಧರಣಿದೇವಿಯುಬಂದು । ಹರಿಗೆಬಿನ್ನೈಸಿದಳುಬೇಗ ॥ ನರಹರಿಯುಅಭಯವನುಕೊಟ್ಟು ಯದುವಂಶದಲಿ। ತರುಣಿದೇವಕಿಯಲ್ಲಿಅವತರಿಸಿದುಷ್ಟರನು। ತರಿದು ರಕ್ಷಿಸುತಿದ್ದಸಾಧುಸಜ್ಜನರನ್ನು ಪರಮಪುರುಷರನುಕ್ರ

ಷ್ಣನುಹರಿಯೆಷ್ಟೇರ ॥ ೨ ॥ ವಸುಧೆಯೊಳುಕರಿಪುರದಿಶಶಿ
ಯಕುಲವಂಶದಲಿ । ವಸುಧೆಪತಿಗಳುಪುರೂರವ ನಹುಷ
ದುಷ್ಯಂತ ॥ ಹತನಾಗಿಜನಿಸಿದರುದುಷ್ಯಂತಧರಣಿಪಗೆ
ವಸುತ್ರೀಶನುಶಂತನು । ಯುಗವಸಂತೋಷದಲಿರಾಜ್ಯಭಾ
ರವಮಾಡೆ । ಶಶಿಶೇಖರಗೆಜಟಾವಲ್ಲಭೆಯು ಸತಿಯಾಗಿ ।
ಶಿಶುಗಳನುಪಡೆದಳದರೊಳಗೆಭೀಷ್ಮನುಪುಟ್ಟಮಾಯುಳಾ
ದಳುಗಂಗೆಯು ॥೩॥ ಒಂದುದಿನದಲಿಪರಾಶರರುಬಂದು
ನೋಡಿದರು । ಸಿಂಧುನದೀತೀರದಲಿ ಮತ್ಸ್ಯಗಂಧಿಯು
ಯೆಂಬಮಂದಗಮನೆಯನೋಡಿ । ಮಾರನಾಸ್ತ್ರಕೆಸಿಲು
ಕಿಗಂಗೆಯನುತಳಿಯೆಸತಿಯು । ಚಂದ್ರತೇಜದಿಆಗೆರ
ಮಿಸಿದನುಮುನಿಪತಿಯು । ಚಂದದಿಂಜನಿಸಿದರುವೇದ
ವ್ಯಾಸರುಆಗ । ಇಂದುವದನೆಯುಕೆಂಡುಕೇಳಿದಳುನಿಜ
ಸುತನೆಬಿಟ್ಟುಪ್ರೋಪೆಯುಯೆನ್ನನು ॥೪॥ ಜನನಿಕೇಳಮ್ಮ
ನೀಮನದಿಸ್ಮರಿಸಿದಾಕ್ಷಣದಿ । ಅನುವಾಗಿನಾಬರುವೆಯೆಂ
ದುಪೇಳುತಮುನಿಯು। ಘನತಪಕೆಪೊರಟುಬದರಿಕಾಶ್ರ
ಮಪ್ರೊಕ್ಕವನಿತೆಯಿದ್ದಳುಇತ್ತಲು ॥ ಜನಪಶಂತನುಬಂ
ದುನೋಡಿದನುಈಕೆಯನು । ಮನಸಿಜನಬಾಣದೋಳ್ಸಿ
ಲುಕಿಕೇಳಲುಸತಿಯು। ಸನುಮತವುಇಲ್ಲವೆನುತಪೇಳೆಧರ
ಣಿಪನುಮನದಿದುಗುಡದಿಪ್ರೊಕ್ಕನು ॥೫॥ ದುಗುಡವನು
ಕೈಕೊಂಡತಂದೆಯನುನೋಡುತ್ತ । ಮಗನಾದಭೀಷ್ಮ
ಬಂದೆರಗಿದನುಚರಣದಲಿ ॥ ದುಗುಡವೇಕೈತಂದೆ ವನಿತೆ
ಯನುತಹೆನೆಂದು ಭಾಷೆನಾಡುತಲಿಬಂದು । ಬಗೆಬಗೆ

ಯುನೀತಿಗಳಪೇಳಿಶಪಥವಮಾಡಿ । ಮೃಗನೇತ್ರೆಯನು
ತಂದುನಿಜಪಿತಗೆ ಕೂಡಿಸಿದ । ಜಗಕೆಅತಿಶಯಸುತನು
ಪುಟ್ಟಿದನುಧೀರ ವಿಚಿತ್ರವೀರ್ಯನುಯೆಂಬನು ॥೬॥ ತರಳ
ನನುನೋಡುತ್ತಧರಣಿಪನುಸಂತೋಷದಲಿ। ಇರುತಿರಲು
ವಂದುದಿನಸುರರನಗರವಪಡೆಯೆ। ಕರುಣದಲಿರಕ್ಷಿಸಿದಾ
ಭೀಷ್ಮಾಚಾರ್ಯನುಸುತನದಿನದಿನಕೆಬೆಳೆಯುನೋಡಿ॥ತರು
ಣಿಯರಇಬ್ಬರನು ಅಂಬೆಅಂಬಾಲಿಕೆಯು । ವರಿಸಿಮದುವೆ
ಯುಮಾಡಿಸಂತೋಷದಿಂದಿರಲು । ಮರಣಪಡದನುಕಾ
ಲಗತಿಯಿಂದವಿಚಿತ್ರವೀರ್ಯನೆಂಬೊಅರಸನು ॥೭॥ ಮಕ್ಕ
ಳಿಲಿಯಲುತರುಣಿನೋಡಿ ಮನದಲಿಮರುಗಿ । ದುಃಖದಲಿ
ಪೇಳಿದನುತನಯ ಭೀಷ್ಮನಕುರಿತು । ಪೆಕ್ಕಸವುತಿಯಿ
ನ್ನಬಾಳನೋಡೈಮಗನೆಮದುವೆಮಾಡಿಕೊಯೆನ್ನಲು ॥
ಅಕ್ಕತಂಗಿಯುಜನನಿಯರುಕೇಳಿಅಮ್ಮರು । ಮಿಕ್ಕಾದ
ಮಾತನಾಡೆಂದೆನಲು ವನಜಾಕ್ಷಿ । ಥಕ್ಕನೆಸ್ಮರಿಸಿದಳು
ವೇದವ್ಯಾಸರನುಬೇಗ ಬಂದುಕಂಡುಮಾತೆಯ ॥ ೮ ॥
ನಿನ್ನಸೊಸೆಯರಕಳುಹುಯೆಂದು ಪೇಳಲುಮುನಿಯು ।
ಕನ್ನೆಯರಕಳುಹಿದಳುಮುನಿಯತೇಜವನೋಡಿ। ಕಣ್ಣ
ಮುಚ್ಚಿದಳುವಬ್ಬಳುಗಡಗಡನೆನಡುಗೆ ಭಕ್ತಿತಾಳಿದಳೊ
ಬ್ಬಳು॥ ತನ್ನಮನದಲಿತಿಳಿದುಪೇಳಿದನುಮುನಿಪತಿಯು
ಕಣ್ಣಕಾಣದಲೊಬ್ಬಜನಿಸುವನುಅಂಧಕನು। ಘನಪಾಂ
ಡವನೆಂಬುವಬ್ಬಳಲಿಜನಿಸುವನು ಪನ್ನಗಧ್ವಜನೊಳು ॥
೯ ॥ ಭಕ್ತಿಯುಳ್ಳವನೊಬ್ಬಜನಿಸುವನುಕೇಳಮ್ಮ । ಸತ್ಯ

ಸತ್ಯವುಯೆಂದುಪೇಳಿ ತೆರಳಿದಮುನಿಪ । ಮತ್ತೆಕಾಸಿನಿ ಯರೊಳುಪುಟ್ಟಿದರುಮೂರುಜನಸತ್ಯವ್ರತಸಂಪನ್ನರು ಅರ್ಥಿಯಿಂದಲಿ ಪೆಸರನಿಟ್ಟಪಿತ್ರಿತಿಲಿ । ಭೀಷ್ಮಪೃಥ್ವೀಶ ಪಾಂಡುಧೃತರಾಷ್ಟ್ರವಿದುರನುಯೆಂದುನಿತ್ಯಸಂತೋಷದಲಿ। ಸಲಹುತಿದ್ದನುಯಿದ್ದನುಯಿವರಮತ್ತೆಪೇಳುವೆ ಯೆಂದನು ॥೧೦॥ ಧರೆಯೊಳಗೆಕಾಂಭೋಜದೇಶದೊಡೆಯನ ಮಗಳ । ಅರಸುವಾದಾಧಿಪನಪುತ್ರಿಯನುಸುಕಿಂತಾ । ನೆರಸಿವೈವಾಹಿಕವಮಾಡಿದರು ಪಾಂಡುವಿಗೆತರುಣಿಯನು ಗಂಧಾರಿಯು ॥ ಹರುಷದಲಿಧೃತರಾಷ್ಟ್ರನಿಗೆ ಮದುವೆ ಮಾಡಿದರು। ಪರಮಹರುಷದಿಂದಯಿರುತಿರಲುವೊಂದು ದಿನ। ಅರಸಪಾಂಡುವಸತಿಯರೊಡಗೂಡಿವನದಲಿವುರು ತರದಶಾಪಗೊಂಡು ॥೧೧॥ ತರುಣಿಯರವಡಗೊಂಡುಗಿರಿಶತಶೃಂಗದಲಿ । ಪರಮತಪವನುಮಾಡುತಿರಲು ಅತ್ತಲುವ್ಯಾಸ। ಪರಿಣಾಷೆಗಾಂಧಾರಿದೇವಿಗುಪದೇಶವನುಕರುಣದಿಂದಲಿಮಾಡಿದ॥ ವರವುಮಾತಕರುಜನಿಸುವರೆಂದು ಪೇಳುತ । ಪೊರಟಮುನಿತಪಕಾಗ ಈವಾರ್ತೆ‍ಕೇಳಿದಳು ತರುಣಿಕುಂತೀದೇವಿ ತನ್ನಗಂಡಗೆಯೆರಗಿಮುರುಗಿಬಿನ್ನೈಸಿಬೇಗ ॥ ೧೨ ॥ ವಲ್ಲಭನೆಕೇಳೆಂದುಬಲ್ಲಿದನುದೂರ್ವಾಸ । ವಳ್ಳೆಮಂತ್ರವುಯೆನಗೆ ವುಪದೇಶಮಾಡಿದನು । ನಲ್ಲನಿಮ್ಮಾಜ್ಞೆಯನುಯನಗೆಕೊಟ್ಟರೆನಾನುಪಡದುಕೊಳ್ಳುವೆಮಕ್ಕಳ ॥ ವಲ್ಲಭೆಯಮಾತಕೇಳುತ್ತಪಾಂಡವರಾಯ। ವಳ್ಳೆಕಾರ್ಯವುಆಯಿತ್ತುಹಾಗೆಆಗಲಿಯನ್ನೆ। ಸಲ್ಲಲಿತದಿಂದ

ಕುಂತಿಯುಸ್ನಾನವನುಮಾಡಿ ಜಪಿಸಿದಳುಮಂತ್ರವನು॥
೧೩॥ ಬಂದುಪೇಳಿದಯಮನು ಕಂದನಾಗುವನೆಂದು ।
ಮಂದಗಮನೆಯುಕೇಳಿಮನದಿಹರುಷಪತಾಳಿ। ಚಂದದಿಂ
ದಿರುತಿರಲುನವಮಾಸವನುನಲ್ಲೆ ಯಿಂದುಮುಖಿಗರ್ಭ
ದಲ್ಲಿ ॥ ಚಂದ್ರತೇಜದಿಜನಿಸಿದನುಧರ್ಮನೆಂದನು । ಮಂ
ದಹಾಸವಪಟ್ಟರೆಲ್ಲರುಋಷಿಗಳುಯಲ್ಲ । ಪಂದುದಿನದೊ
ಳುಜಪಿಸಿದಳುವಾಯುದೇವರನು ಭೀಮಪುಟ್ಟಿದಗರ್ಭದಿ॥
೧೪॥ ಕುಂತಿದೇವಿಯುಬಸುರಾಳಾ ಮಕ್ಕಳಾದುದಕೇಳಿ
ಚಿಂತೆತಾಳುತ್ತಗಾಂಧಾರಿದೇವಿಯು ಆಗ । ಯೆಂತುಮು
ನಿಪನಮಂತ್ರಯೆಂದುಕೆಹುಕೆವಮಾಡಿಗರ್ಭವನು। ಹೊ
ಸಕೆಷ್ಣದೀಕ್ಷಂತುವಿನತೆರದಿನೂರೊಂದುಬೀಳಲುಗರ್ಭ ।
ಇಂತುಕಾರ್ಯವುಂಟೆಯುನುತವ್ಯಾಸರುಬಂದು । ಹೊಂತ
ಕಾರಿಗಳಾಗುವರೆಂದು । ತೈಲದಲಿಯಿಡಿಸಿದರುಶಿಶುಗಳಾ
ಯುತ್ತ ॥ ೧೫ ॥ ಶಿಶುಗಳನುನೋಡುತ್ತ ಕುರುರಾಯುದು
ಶ್ಯಾಸಪೆಸರನಿಟ್ಟರುಯೆಲ್ಲ। ಬೇರೆಬೇರೊಂದಾಗಿಕಶಿವದನೆ
ಕುಂತಿದೇವಿಯುವಾರ್ತೆಕೇಳಿದಳು । ಶಚಿಪತಿಯುಜಪಿಸೆ
ಷಣದೀ ॥ ಕುಸುಮಾಕ್ಷಿನಿನ್ನಗರ್ಭದಿಲೋಕವಿಕ್ರಮನು
ಹಸನಾಗಿಜನಿಸುವನುಯೆಂದು ಅಪ್ಪಣೆಕೊಡಲು । ವಸು
ಧೆಭಾರವನಿಳುಹುವದಕೆ ಹರಿಯುನರನಾಗಿ ಜನಿಸಿದನು
ಪಾರ್ಥನೆಂದು ॥೧೬॥ ಯುನಗೆಮಕ್ಕಳುಸಾಕುಯೆಂದು
ಕುಂತಿಯುತಿಳಿದು । ವನಿತೆಮಾದ್ರಿಗೆಮಂತ್ರವುಪದೇಶ
ಮಾಡಿದಳು । ಘನಮಂತ್ರವನುಜಪಿಸೆ ಜನಿಸಿದರುಕುಕೆ

ಯಲಿ ನಕುಲಸಹದೇವರೆಂದು ॥ ತನಯರನುಕಾಣುತ್ತ
ಪಾಂಡವರಾಯನುವನದಿಘನತೋಷವನುತಾಳಿ ಇರುತಿ
ರಲುಪೊಂದುದಿನ । ವನಿತೆಮಾದ್ರಿಯುಕಂಡುರವಿಸೆಶಾ
ಪದಿರಾಯನುಸುರರನಗರಿಗೆಸರಿದನು ॥೧೭॥ ಮುನಿಗಳೆಲ್ಲ
ರುನೋಡಿ ಕೃತ್ಯಗಳಮಾಡಿಸುತ । ಘನವಾದಗಿರಿಯಲಿ
ಇವರಿರುವತಾವೆಲ್ಲ । ಎನುತಯೋಚನೆಮಾಡಿ ಕುಂತಿಯು
ನುಬಾಲರನುಸಹಿತವಡಗೊಂಡುಪುರಕೆ ॥ ಜನಪಭೀಷ್ಮ
ರಬಳಿಗೆಬಿಟ್ಟುತೆರಳಿದರವರು । ವನಿತೆಕುಂತಿಯುಮಕ್ಕ
ಳನುಸಹಿತನೋಡಿದನು । ಕನಕಭವನವಕೊಡಿಸಿಸಲಹು
ತಿದ್ದನುಮುದದಿ ಐದುಜನಮಕ್ಕಳುಗಳಾ ॥೧೮॥ ವೀರ
ಪಾಂಡವರು ಕೌರವರಿಂಗೆಸಹಿತ । ಧಾರುಣೀಸುರರಾದ
ದ್ರೋಣಕೃಪರವಿದ್ಯೆ । ಮೇರೆಯಿಲ್ಲದೆಯೆಲ್ಲಕಲಿಸಿದರುತ
ನಯರಿಗಿಧೀರಪಾರ್ಥನಕೇಳಲು ॥ ಧಾರುಣೀಪತಿದೃಪದ
ರಾಯನನುಕಳತಂದು । ಪೋರಂತೆವೊಪ್ಪಿಸಿದ ಗುರುದ
ಕ್ಷಿಣೆಯನೋಡಿ । ಭೂರಿಹರುಷವಪಟ್ಟುಹರಸಿದನುಫಲು
ಗುಣನಮಾರುತಾತ್ಮಜನಪೊಗಳೆ ॥೧೯॥ ದಿನದಿನಕೆವೈ
ರತ್ವಮುರೆಬೆಳೆಯೆಆಟದಲಿ । ಕುಣಿಕುಣಿದುಯಲ್ಲರನುಬ
ಡಿಯುತಿದ್ದನುಭೀಮ । ಘನವಾದಕ್ರೋಧಪುಟ್ಟತುಪೇ
ಳಲೇಕಿನ್ನು । ವನಜನಾಭನಮಾಯೆಯು ॥ ದಿನವಂದು
ಯುಗವಾಗಿಇರಲೊಂದುದಿನದಲ್ಲಿ। ಮುನಿಪವೇದವ್ಯಾಸ
ಬಂದುಐರಾವತವ । ವನಜಾಕ್ಷಿಗಾಂಧಾರಿದೇವಿಗುಪದೇಶಿ
ಸಿದಕುಂತೀದೇವಿಯು । ಕರಸದೆಮರತುನೋಂತಳುವ್ರತ

ವಹರಿಣಾಕ್ಷಿಕೇಳಿದಳು । ಮರುಗಿದುಃಖವತಾಳೆಸುರಪನಂ
ದನಬಂದು । ಚರಣಕೆರಗುತ ಮಾತೆಮನದಿದುಃಖವಕಳ
ದುಪರಮಶೌರ್ಯದಲಿಂದಲಿ॥ ಶರವಕೈಕೊಂಡುಸುರಲೋ
ಕಕಿಡಲಾಕ್ಷಣದಿ । ಸುರಪತಿಯುಕಳುಹಿದನುಐರಾವತವ
ಬೇಗ । ಧರೆಯುಅತಿಶಯಮಾಗೆ ವ್ರತವನ್ನೆಮಾಡಿದಳು
ಸುರರುಚೋದ್ಯವಪಟ್ಟರು ॥ ೨೧ ॥ ಕುರುರಾಯನಿವಕಂ
ಡುಚಿಂತಿಸುತಶಕುನಿಯುಂ । ಬರಸಿಕರ್ಣನಸಹಿತ ಸಭೆ
ಮಾಡಿಯೋಚಿಸಿದ । ಅರಸನೆಲಿಸದನವನುಮಾಡಿಸಿದವಾ
ರಣಾವತಿಯೆಂಬೊನಗರದಲಿ ॥ ಪರಮಸತ್ಯನು ವಿದುರ
ಬಿಲದ್ವಾರವಮಾಡಿಸಿದ । ದುರುಳದುರ್ಯೋಧನನುಧೃತರಾ
ಷ್ಟ್ರನಿಗೆಪೇಳೆ । ಆಗಕರಸಿದನುಪಾಂಡವರನಿಮಗಿರುವ
ಸ್ಥಳವನ್ನುವಾರಣಾವತಿಯುಯುನ್ನೆ ॥ ೨೨ ॥ ಚರಣಕೆರ
ಗುತಅಪ್ಪಣೆಯುಗೊಂಡುತೆರಳಿದರು । ಸ್ಥಿರಮುಹೂರ್ತ
ಸದನಪೊಕ್ಕುಇರಲಾರಾತ್ರೆ । ಚರಪುರೋಚನಬಂದುದು
ನೆಗೆಅಗ್ನಿಯುತೋರೆ ಉರಿಯುಗಗನಕೆಮುಸುಗೆ॥ ಶಿರದಿ
ಪೊತ್ತನುಭೀಮಐವರನುಸಹಿತಾಗಿವುರುತರದವನದಲ್ಲಿ
ಇರಲುಹಿಡಿಂಬಕನ । ತರಿದುಅವನನುಜೆಯೊಳ್ರಮಿಸೆ
ವಿಕ್ರಮತನಯಜನಿಸಿದನುವೇಗದಲ್ಲಿ ॥ ೨೩ ॥ ಧರಣಿಸುರ
ರಾಗಿಯೇಚಕ್ರಪುರದಲಿ । ಇರುತಿರಲುವಂದುದಿನ ಬಕನ
ಅಸುವನುಕೊಂದು । ಧರಣೀಶದ್ರುಪದರಾಯನಪುರಿಗೆಬ
ರುತಿರಲುಧುರದಿ ಗಂಧರ್ವಕನನು ॥ ಉರಿಯುಕೊಳ್ಳಿಯು
ಬಿಟ್ಟುಜೈಸಿದನುಕಲಿಪಾರ್ಥ । ಪರಿಪರಿಯವಸ್ತ್ರಾಭರಣ

ವನುತಂದಿಡಲು ಪರಮಸ್ನೇಹವಪಡದು । ತೆರಳಿದರು
ಮುಂದಕ್ಕೆದ್ರುಪದರಾಯನನಗರಕೇ ॥೨೮॥ ಶರವನ್ನುಜೈ
ಸಿದ್ರುಪದಾತ್ಮಜೆಯುವಡಗೂಡಿ । ಶಿರಿಪತಿಯುಸಹಿತಬಂ
ದರುಹಸ್ತಿನಾವತಿಗೆ । ಕುರುರಾಯತಿಳಿದು ಮನ್ನಿಸಿದ
ಸ್ನೇಹಗಳಿಂದಹರುಷದಲಿ ॥ ಐದುವರುಷಯಿರುತಿದ್ದರತಿ
ಸೌಖ್ಯದಿಂದೆಲ್ಲರೊಂದಾಗಿ । ಮರಳಿರಾಷ್ಟ್ರವಅಂಟಇಂ
ದ್ರಪ್ರಸ್ಥವಕೆರಿಡಲು । ಸುರರನಗರಿಯಪ್ರೋಲ್ವ ಪುರದಿ
ಐವರುನೃಪರುಧರೆಯಪಾಲಿಸುತಿರಲು ॥೨೯॥ ಸುರಮು
ನಿಪನಿಂದನೀತಿಗಳನ್ನುಕೇಳಿದರು । ಇರುಳುಚೋರರಬಾ
ಧವಸುಧೆಸುರರಿಗೆಆಗೆ। ಶರವಕೈಕೊಳುವದಕೆಪಾರ್ಥಅಂ
ತಗೃಹಕೆಪೊಕ್ಕುನೋಡಿದನುಅಲ್ಲಿ। ಅರಸಸತಿಸಹಿತವಂ
ದಾಗಿರಲುಕಾಣುತ್ತ । ಹರಿಯಸ್ಮರಿಸುತಪೊರಟುಚೋರ
ನುಸಂಹರಿಸಿ । ಧರಣಿಸುರನನುಸಲಹಿಪೊರಟ ಅರ್ಜುನ
ರಾಯಧರೆಪ್ರದಕ್ಷಿಣೆಗೋಸುಗ ॥ ೩೦ ॥ ಎತಿರೂಪವನು
ತಾಳಿಪೊಕ್ಕ ದ್ವಾರಾವತಿಯ । ರತಿಪತಿಯಪಿತಕೃಷ್ಣ
ಕಂಡುತಂಗಿಯಕೊಟ್ಟ । ಮತಿಗೆಸಂತಸತಾಳಿಸತಿಯ
ನ್ನವಡಗೊಂಡುಬಂದಇಂದ್ರಪ್ರಸ್ಥಕೆ । ಅತಿಶಯದಿರು
ತಲಿದ್ದರುಯೆಲ್ಲರೊಂದಾಗಿ। ಅತುಳವಿಕ್ರಮನುರಕ್ಷಿಸುತಿ
ರ್ದಪಾಂಡವರ । ಕ್ಷಿತಿಯೊಳಿವರನುಪ್ರೋಲ್ವ ಪುಣ್ಯರ್ಯಾ
ರುಂಟುಯೆಂದುಪೇಳಿದಮುನಿಪನು ॥೩೧॥ ಒಂದುದಿನ
ಸುರಮುನಿಪಬರಲುನೋಡುತಲಿವರು । ವಂದಿಸುತಭಕ್ತಿ
ಯಲಿಕರವಮುಗಿದುಪೊಗಳಿದರು । ಚಂದದಿಂರಾಜಸೂ

ಯುಕೆಅಪ್ಪಣೆಯುಕೊಡಲುಮಂದಹಾಸವತಾಳುತ॥ ಕಂ
ದರ್ಪನಯ್ಯವೊದಲಾದಭೂಭುಜರನ್ನು । ಇಂದುಮುಖಿ
ಯುರಸಹಿತಕರಸಿದನುಯೆಲ್ಲರನು । ಕುಂದಣದಮನೆಗಳ
ನುಕೊಡಸಿದನು ಪ್ರೀತಿಯಲಿ ಬುಧಜನಕೆಸಹಿತವಾಗಿ॥
೨೮॥ ಪರಮಸಂತೋಷದಲಿರಾಜಸೂಯುವವಾಡಿ । ಶಿರಿ
ಪತಿಗೆಪೂಜೆಯುಕೊಟ್ಟಧರಣಿಪನುವರರತ್ನದಾಸ್ಥಾನದ
ಲ್ಲಿ । ಕುಳ್ಳಿರಲಾಗಕುರುಪತಿಯುಬಂದನಲ್ಲಿ॥ ಪರಿಪರಿಯ
ಮಾನಭಂಗಗಳಾಗೆಕೌರವನು । ಪರಮದುಗುಡದಲಿಂದ
ಪುರವನ್ನುತಾಪೊಕ್ಕು । ಮರುಗಿಶಕುನಿಯುಕಂಡುನೀತಿ
ಪೇಳಲಾಕ್ಷಣದಿಕರಸಿದನುಪಾಂಡವರನೂ ॥೨೯॥ ಪಗಡೆ
ಆಟವನಾಡಿಸರ್ವಸಿರಿಯನುಗ್ರಹಿಸಿ । ಮೃಗನೇತ್ರೆದ್ರೌ
ಪದಿಯುಶರಗಳಶೆಳೆಯಲುದೇವಿ । ನಗಧರನಪೊಗಳಿದಳು
ದೂರುಕೇಳಿದಕೃಷ್ಣ ಅಗಣಿತವಸ್ತ್ರವಕೊಟ್ಟನು ॥ ಜಗ
ದೊಳದ್ಭುತ್ರವಾಯ್ತುಹರಿಮಹಿಮೆಘನವೈಯ್ಯೊ । ಪಗಡೆ
ಯಾಡಿದರುಸರ್ವಸ್ವ ಶಿರಿಯನುಕೊಳಲು । ಖಗಮೃಗಗ
ಳಿರುವವನವಾಸವನೆಕೈಗೊಂಡು ಸತಿಸಹಿತಪೊರಟರವ
ರೂ ॥೩೦॥ ಬರುತಕಿಮ್ಮೀರನನುವನುಕೊಂದುಕಾಮ್ಯಕ
ವನದೊಳಗೆ । ಇರುತಿರಲೊಂದುದಿನಶಿರಿಪತಿಯುಬಂದು
ಅರಸರ್ಗೆವರವನ್ನಿಸಿಕೃಷ್ಣತೆರಳಿದನು ತನ್ನನಿಜಪುರಕೆ
ಬೇಗ ॥ ತರಣಿಯಕ್ಷಯಪಾತ್ರೆಕೊಟ್ಟನರ್ಜನರಾಯಗ
ಳಕಂಠನಲಿಶರಗಳಪಡದುಸುರಪುರದಿ । ತರುಣಿಊರ್ವ
ಸಿಯಲ್ಲಿಶಾಪವನುಕೈಕೊಂಡುಬಂದುಅಣ್ಣನಿಗೆನಮಿಸೆ॥

೩೧॥ ಶರಗಳಿಂಪಲಿತಬ್ಬಿ ಮನ್ನಿಸಿದಅನುಜನನು । ವರುಷ
ಹನ್ನೆರಡುಸಂದವು ಕಾನನೆದವಾಸ । ಧರಣಿಪತಿಯತಿ
ಯಾದವಮರುತಜನುಬಾಣಸಿಗಸುರಪಸುತ ಶಿಖಂಡಿರೂಪ
ತಾಳ್ದ ॥ ತುರುಗಗೋಕುಲರಾದರುವಾದ್ರಿನಂದನರು ।
ತರುಣಿದ್ರುಪದಾತ್ಮಜೆಯುಸೈಳೇಂದ್ರಿಯಾದಳು । ಧೊರೆ
ವಿರಾಟನಪುರಿಗೆಬಂದುಶೇರಿದರಿವರು ಪ್ರಾಚೀನದೊಡ್ಡಿತ
ಯ್ಯಾ ॥೩೨॥ ಪರಿಪರಿಯಸೇವೆಯೊಳ್ ಇರಲೊಂದುದಿ
ನದಲ್ಲಿ । ದುರುಳಕೀಚಕಕಂಡು ದ್ರೌಪದಿಗೆಮನವಿಕ್ಕಿ ।
ಕೊರಳಮುರಿದನುಭೀಮ ವಾರ್ತೆಕುರುನೃಪಕೇಳಿತುರುಗ
ಳನುಪಿಡಿದನಾಗಾ ॥ ಸುರಪಸುತಮರುತಜನುಬಂದುಸೇ
ನೆಯುಪೊಕ್ಕು। ಶರಗಳಿಂದಲಿಸಮರವಾಡಿಪೋಗಿಸಿಸೇನೆ
ತುರುಗಳನುಬಿಡಿಸಿಐವರುಸಹಿತ ನಿಜರೂಪದಿಂದಸಿಹ್ಮಾ
ಸನದಲಿ ॥೩೩॥ ಕುಳ್ಳಿರಲುಮತ್ಸ್ಯಭೂಪನುನೋಡಿಸ್ತು
ತಿಸಿದನು । ಪುಲ್ಲಾಕ್ಷನನುಕರಸಿಯೆಲ್ಲವನುವಪ್ಪಿಸಿದ। ಬ
ಲ್ಲಿದರುಯಿವರೆಂದುತನ್ನ ಮಗಳನ್ನು ಕೊಟ್ಟುಫಲುಗುಣನ
ಸುತಗೆಮದುದದಿ॥ ಒಳ್ಳೆವಸ್ತುಗಳುಕೊಟ್ಟುಮನೆದಣಿಯೆ
ಅಳಿಯನಿಗೆ। ಚಲ್ವಕೃಷ್ಣನುಸಂಧಿಮಾಡಬೇಕೆಂದೆನುತ
ಸಲ್ಲದೇಕರಿಪುರಿಗೆವಿದುರನಮನೆಯುಬಕ್ಕ ದೇವಾಧೀಶನು॥
೩೪॥ ಸಂಧಿಮುರಿಯಲುದೇವಬಂದುನೆರಹಿದಬಲವ।ಬಂ
ದರೈಯುಲ್ಲನರಪತಿಗಳುಜನಗಳುಸಹಿತ। ಬಂದನೈಕೌರ
ವನುತನ್ನಸೇನೆಯೊಡಗೊಂಡು ಸಮರಕನುವಾದರಲ್ಲಿ ॥
ಬಂಧುಬಳಗವಕಂಡುಫಲುಗುಣನುಕೈಗುಂದೆ। ಸಿಂಧುಶ

ಯುನನುನೋಡಿ ನಿಜವನ್ನುಬೋಧಿಸಲು । ಬೆಂದುದೋ
ಜಗವೆನಲುಸುರಳತೀರಿದಪಾರ್ಥಕದನಪ್ರಾರಂಭವಾಗೆ ॥
೩೫॥ ಹತ್ತುದಿನಕಾದಿದರುಭೀಷ್ಮಪಾರ್ಥನುಸಹಿತವೆಂ
ತನೇಕರೆಕಯುನವನತೊಟ್ಟಶೌರ್ಯದರಿ। ಕೃತ್ರಿಮದವ್ಯೂ
ಹದಲಿ ಅಭಿಮನ್ಯುವಿನಕೊಲ್ಲೆ ಚಿತ್ತದಲಿಖತಿಯುಗೊಂ
ಡು ॥ ಕತ್ತರಿಸಿದನುಸೈಂಧವನತಲೆಯುಸತ್ವದಲಿ।ಮತ್ತೇ
ಭವನುಮುರಿದುಭಗದತ್ತನನುಕೆಡಹಿ । ಕತ್ತಲೆಯುಕವಿ
ಸಿದುಶ್ಯಾಸನನಮುರಿದಿಟ್ಟ ಪ್ರಳಯವಾಯಿತುಸಮರವು
ಗುರುಗಳಲಿಐದುದಿನಕಾದಿಸುರಲೋಕಕೆ। ತರಣಿಸುತಸ
ಮಸಪ್ತಕರಕೊಂದುಕರ್ನನೊಳು। ಪರಮವಿಕ್ರಮದಿಂದ
ಕಾದಿಶಿರವನುಕೆಡಹಿಶಲ್ಯನನುಮುರಿದುಯಿಡಲು॥ ಕುರು
ರಾಯತಿಳಿದುಕೊಳವನಪೊಗಲು। ಮರುತಜನುಪರಮ
ಕೋಪವತಾಳಿಗದೆಯಿಂದಕೌರವನ। ತರಿದುಕೆಡಹಿದಯ
ಲ್ಲಸೇನೆಯನುಸಂಹರಿಸಿಧರಣಿಭಾರವಕಳದರು ॥೩೭॥ ಕು
ರುಕುಲವನಿರ್ಮೂಲವನುಮಾಡಿಎಲ್ಲರಿತು । ಮುರರಿಪುವ
ಆಜ್ಞೆಯಿಂದಲಿಕೃತ್ಯವನುಮಾಡಿ । ಪರಮಶುಭಲಗ್ನದ
ಲಿಪಟ್ಟಾಭಿಷೇಕವನುವಿರಚಿಸಿದರ್ಧರಣಿಸುರರು ॥ ಹರು
ಷದಿಂದಲಿರಾಜ್ಯವನುಮಾಡಿ ಧರ್ಮಜನು । ವರಮಹಾಕ್ರ
ತುವನ್ನುರಚಿಸಿಜನಗಳೆಲ್ಲ । ಪರಿಪರಿಯದಕ್ಷಿಣೆಗಳಲಿದಣಿ
ಸಿದನುಸತ್ಯವನುದಾಳ ಧರೆಯುಪಾಲಿಸುತಿರ್ದನು ॥೩೮
ಅರ್ಥಿಯಿಂದಲಿರಾಜ್ಯವಾಳುತಿರಲಾವ್ಯಾಳೆ ಕೃತ್ರಿಮದಕ
ಲಿಬರಲು ಮುಸಲಪರ್ವದುಹರಿಯು । ಅತ್ತವೈಕುಂಠಗವಿ

ಸಲುಕೇಳಿನೋಡಿದರುಅರಸುಪಾಂಡವರೈವರು॥ ಸತ್ಯದಿಂ ದಲೆಹಸ್ತಿನಾವತಿಯ ನಗರವನು। ವಿಸ್ತರಿಸಿಪಟ್ಟವನು ಕಟ್ಟಿಸಿದಪರೀಕ್ಷಿತಗೆ। ಅತ್ಯಧಿಕ ಸ್ವರ್ಗರೋಹಣಕೈದಿ ಮುರಹರನ। ಪತ್ತಿನೊಳಿರುತಿರ್ದರ್ಕೈಧರೆಯೊಳಗೆ ॥೩೯ ಭೂವೈಕುಂಠಪುರವು ತಿರುಪತಿಗಿರಿಯು। ಶಿರಿಪತಿಯುಸ್ಮರಿ ಸಿಪೇಳಿದನುವೈಶಂಪಾಯು। ಅರಸಜನಮೇಜಯಗೆಪರ ಮಪುಣ್ಯಾದಕಥೆಯು ಧರೆಯುಜನಗಳುಯುಲ್ಲರು ॥ ಅರುಣ ವುದಯದೊಳೆದ್ದು ಓದಿಕೇಳುವನರರ। ದುರಿತಗಳಪರಿಹ ರಿಸಿಪರಮಸಿರಿಯನುಕೊಟ್ಟು। ಪರಿಪರಿಯುಬೇಡಿದಿಷ್ಟಾ ರ್ಥವನುಕರುಣಿಸುವವರಪುತ್ರರನ್ನು ಕೊಡುವ॥೪೦॥ ಶರ ಣುಜನವತ್ಸಲನು ಸುರಮುನಿಪವಂದಿತನು। ಗರುಡವಾ ಹನಪುಂಡರೀಕಾಕ್ಷಕೇಶವನು। ಸರಸಿಜಾಸನಪಿತನುಸನ ಕಾದಿಪೂಜಿತನು ನರಸಿಂಹನಾರಾಯಣ ॥ ಪರಮಪುರು ಷಪರೇಶಹರಿಚಂಪಕಾಪುರದ। ಅರಸವೆಂಕಟವರಮಣಭಕ್ತ ರನುಪೊರೆಯುವನುಸ್ಥಿರಭಕ್ತಿಯಿಂದ। ಈಕಥೆಕೇಳಿಪೇ ಳುವರಪುರಗಶಯನಕೃಷ್ಣನು॥ ಹರಿಯೆಕ್ಷೀರಸಾಗರ ಶಯನನೆ॥ ... ... ॥೪೧॥

ಒಳ್ಳೇದೀಶಕುನಫಲವೆಲ್ಲನಮಗೆ। ಲಕ್ಷ್ಮೀವಲ್ಲಭನಸೇ ವೆಮೊರಕೊಂಬುದೆಲೆರಮಣಿ। ಒಳ್ಳೇದೀಶಕುನಫಲವೆಲ್ಲ ನಮಗೆ ॥ಪ॥ ವಾಮಗರುಡನೆನೋಡು ವಾಯುಸದಫಲಗ ಳನು। ಕೋಮಲಾಂಗಿಯುಕೆರಡುಪೂರ್ಣಕುಂಭಾ ॥ ಸಾ ಮಾನ್ಯವೇನವಿಲೇಬಲದಿಕಾಣಿದಾಡುತಿದೆ। ಪ್ರೇಮದಿಂ

ಮಧುರವಚನವಕೇಳುರಮಣೀ। ವಳ್ಳೀದೀಕಶಶನಫಲನೆಲ್ಲ ನವಿಗೆ॥೧॥ ಮೊಳಗುತಿದಭೇರಿದುಂದುಭಿಮುಂಗಳವಾದ್ಯ ಗಳು। ಫಲಪುಷ್ಪದಧಿಗಳದುರಾಗಿತಿಬಕೋ। ಚಲುವಭಾ ರದ್ವಾಜಅಂಗನೆಡನಾಡುತಿದೆ। ಗೌಳಿಬಲನಾಡುತಿದೆಕೇ ಳುರಮಣೀ ॥ ವಳ್ಳೀದೀ॥೨॥ ನೋಡುಯಿಬ್ಬರುಬ್ರಾಹ್ಮರ ದುರಾಗಿಬರುವರನು। ಕೈಗೂಡುವದುಮನದಿ ಸಂಕಲ್ಪ ವೆಲ್ಲ। ಬೆಂಡೆದೊರೆಗಳನೀವಪುರಂದರವಿಠಲರನ್ನ। ಕೊಡಿ ಸಂಭ್ರಮದಿಂದಯಿರುವದೆಲೆರಮಣೀ। ಒಳ್ಳೀದೀಶಕುನ ಫಲವೆಲ್ಲನವಿಗೆ। ಲಕ್ಷ್ಮೀವಲ್ಲಭನಸೇವೆದೊರಕೊಂಬುದೆಲೆ ರಮಣೀ ॥ ಒಳ್ಳೀದೀಶಕುನಫಲವೆಲ್ಲನವಿಗೆ ॥ ॥೩॥

ಕೋಳಿಕೂಗಿತಲ್ಲಾ ಲಕ್ಷ್ಮೀಲೋಲನಲ್ಲದೆಬೇರೆ ಇಹ ಪರವಿಲ್ಲವೆಂದೂ। ಕೋಳಿಕೂಗಿತಲ್ಲಾ ॥ ಪ ॥ ಮೊದಲು ಜಾಮದಲ್ಲಿಮುಕುಂದನೆಂದು ಕೂಗೆಯೆರಡನೆ ಶ್ರೀವೆಂಕ ಟಾದ್ರಿಯೆಂದು। ಮದಗಜಗಿರಿವಾಸವನಾಡೆಲ್ಲಗಿರಿತಿಮ್ಮ ಚದುರಾಶ್ರೀಚಳಪಿಳ್ಳರಾಯನಲ್ಲದಿಲ್ಲವೆಂದು ॥ ಕೋಳಿ॥೧॥ ಮೂರನೇಜಾಮದಲ್ಲಿಮುಕುಂದನೆಂದುಕೂಗೆ। ನಾಲ್ಕನೆ ನಾರಾಯಣಯನಲೂ। ಕ್ಷೀರಸಾಗರದಾಸಶ್ರೀಲಕ್ಷ್ಮನರ ಸಿಹ್ಮ। ಕೋನೇರೀಗಿರಿವಾಸವೆಂಕಟನಲ್ಲದಿಲ್ಲವೆಂದು। ಕೋ ಳಿಕೂಗಿತಲ್ಲಾ ॥೨॥ ಐದುಜಾಮದಲ್ಲಿಅನಂತರಕ್ಷಕನೆಂದು ಆರನೆಆಳಗಾದ್ರಿಅಪ್ಪನೆಂದೂ॥ಏಳನೆಕಾಶಿಯಬಿಂದುಮಾ ಧವನೆಂದು। ಎಂಟನೆಶ್ರೀಪುರಂದರವಿಠಲನಲ್ಲದಿಲ್ಲವೆಂದು ಕೋಳಿಕೂಗಿತಲ್ಲಾ ಲಕ್ಷ್ಮೀಲೋಲನಲ್ಲದೆಬೇರೆ ಯಿಹಪರ

ವಿಲ್ಲವೆಂದುಕೋಳಿಕೂಗಿ ॥ ... ॥೩॥

—(ಪ್ರಹ್ಲಾದನ ಉದಯರಾಗವು.)—

ಓನ್ನಮೋನಾರಾಯಣಶೌರೀ । ಓನ್ನಮೋ ನಾರಾಯಣ । ಓನ್ನಮೋ ನಾರಾಯಣಾಯ ವಂದಿತಬ್ರಹ್ಮ । ಪನ್ನಗಾಧಿಪಶಾಯಿಪಾವಕಾಂಬಕಮಿತ್ರ । ಸನ್ನುತಾಮರಮುಖ್ಯಸಕಲಸನ್ಮುನಿಸೌಖ್ಯ।ಚನ್ನಕೇಶವಪಾಹಿಮಾಂ ಶೌರಿ । ಓನ್ನಮೋನಾರಾಯಣ ॥ಪ॥ ಕೃತಯುಗದೊಳಬ್ಬನತಿಕ್ರೂರದೈತ್ಯಾಧಮನು । ಕ್ಷಿತಿಯೊಳುದಿಸಿದನುಸುತನನಿಸಿಲದಿತಿಗೆನಾಮಾ। ಹಿತದೊಳೊಪ್ಪಿತುಹೇಮಕಶ್ಯಪಾಯನಲವನ । ಸತಿಸುಶೀಲೆಯುಳೆಂಬಳಾ ವ್ರತಪುಣ್ಯದಿಂದ । ಶ್ರೀಪತಿಪದಾಂಬುಜಭಕ್ತ । ಚತುರಮಾನಪ್ರಹ್ಲಾದನಾಮಾಖ್ಯದಿಂ । ಸುತನೋರ್ವಜನಿಸಿದನು ಸತಿಯಸುಕೃತವದೇನೋ ಮಿತಿವಿಲ್ಲಮತಿಯೊಳಗೆ ॥೧॥ ಮದಮುಖನುಮನದಿಹಿಗ್ಗಿದನುಮಗುವಿನನೋಡಿ। ಸುದತಿಯುಳತಕ್ಕೈಸಿಶುಕ್ರಾದಿಗುರುಗಳನು। ವಿಧವಿಧದೊಳರ್ಪಿಸಿಲವಿಭವದಿಂದೊಯ್ದಾಡಿ ಮದನವೈರಿಯ ಪೂಜಿಸಿ ॥ ಮುದದಿಂಮಗನತೆಗದಪ್ಪಿಮುದ್ದಿಸುತೊಮ್ಮೆ। ಮೃದುನುಡಿಗಳಾಲಿಸುತ ಪದಗಲ್ಮೈದಾರೋರುಷ ವದರೊಳೊಂದುದಿನ । ತಮ್ಮಗುರುಶುಕ್ರಮಾರ್ಕರನುಬರಸಿನೇಮವನಿತ್ತನು ॥೨॥ ಪರಮಗುರುನೀಯೆನ್ನತರಳನನುಪತಿಕರಿಸಿ। ಕರುಣದಿಂದೋದಿಪುದುವರದಶಾಸ್ತ್ರಗಮುವ॥ ಪರಿಪರಿಯವಿದ್ಯೆಗಳನರುಹುರಾಕ್ಷಸಬೃಂದ । ಗುರುವರನೆಮ

ರ್ಕ್ಕವಿಡದೆತೆರಳಿನುಸುತಸಹಿತ ಕರುಣಾನಿಧಿನೀಯೆಂದು ।
ತರಿಸಿದಿವ್ಯಾಂಬರಸುಗಂಧಾತಾಂಬೂಲವನುಹರುಷದಿಂ
ದಿತ್ತುಸತ್ಕರಿಸಿ । ಗುರುವರನಂಘ್ರಿಗೆರಗಿಕೈಮುಗಿದುನು
ಡಿದಾ ॥೩॥ ಮತ್ತೆಲಾಲಿಪುದುನಾಪೆತ್ತಭರ್ಕನಿಗೊಂ। ದ
ರ್ಥಿಯಿಂವೊದಲಿನಭ್ಯಾಸದಲಿ ಯುನ್ನನುರೆ। ವಿಸ್ತರಿಸಿ
ಪೊಗಳ್ವತೆರನಂತೆ ಓದಿಸುಜೀಯ್ಯಪುತ್ರರತ್ನವನೆನುತ॥
ಉತ್ತರವುಕೊಡಲುಗುರುಚಿತ್ತದಲಿಹರ್ಷಿಸುತ । ಭಕ್ತ
ಚಿಂತಾಮಣಿಯೆಬಾರೆಂದುಬಾಲಕನ।ಯೆತ್ತಿತಕ್ಕೈಸಿಮು
ದ್ದಾಡಿಮುಗುಳ್ನಗೆಯಿಂದ ಉತ್ತಮನಸಾಲಿಗೊಯ್ದ ॥
ಓದಿಸಿದಸಕಲವೇದಾದಿಪುರಾಣಗಳ । ಸಾದನೆಯುಮಾಡಿ
ಸಿದಶಾಸ್ತ್ರತರ್ಕಗಳಿಗೆ । ಆದಿಯಲಿ ಓನ್ನಮೋಹಿರಣ್ಯಾಕ
ಶ್ಯಪಯೆಂಬಭೇದಾಕ್ಷರವಹೇಳಲು ॥ ಶ್ರೀಧರಾಚ್ಯುತಮು
ಕುಂದಾದಿಕೇಶವಕೃಷ್ಣ । ಮಾಧವಾಯೆಂಬ ಮುರಹರಿ
ಯನಾಮವಪೊಗಳೆ । ಸಾಧುಸುಜನಬೈದು ಜಡಿದುದಂ
ಡಿಸಿಯಿವನುವಾದಿನಮಗೆಂದಪಿಪ್ರ ॥೫॥ ಒಡನೆಮನ್ನಿಸಿ
ತನ್ನತೊಡೆಯಮೇಲಿಂಬಿಟ್ಟು । ನುಡಿಮಗನೆ ನಿನ್ನಪಡ
ದವನಾಮವನೆನಲು। ಮೃಡನಾಣೆಮದನಯ್ಯನಅಡಿಯ
ಪೊಗಳದೀಹಡೆನೇನುಘನವೆನ್ನಲೀ। ಮೃಡಯನಹವಾ
ಸುದೇವನಪೊಗಳ್ವಸುಜನರಿಗೆ। ಪಡಿಯಾರುತ್ರಿಜಗದೊ
ಳ್ಕಡುದಯಾನಿಧಿಯನಲು । ಪಿಡಿದೆತ್ತಿಮಂಕುಮಗನೇ
ಕಮಲಾಕ್ಷಕಡುದ್ರೋಹಿನಮಗೆಂದನು ॥೬॥ ಎಂದನುಡಿ
ಕೇಳುತಿಂತೆಂದಗುರುವರನಿನ್ನ। ಮಂದಮತಿಗಿನ್ನೆನೊಂ

ದುಬಿನ್ನೈಸುವೆನು । ಇಂದಿರಾದೇವಿಯರಸನಮಹಿಮೆಗ
ಳಪೊಗಳೆ ಚಂದ್ರಶೇಖನಿಗರಿದು ॥ ಸಿಂಧುಶಯನನಚರಿ
ತಶ್ರವಣಮಾಡಲು ಪಾಪಬಂಧವೆಲ್ಲವು ಪರಿದುಪೋಪುದ
ಯ್ಯ । ದಾನವೇಂದ್ರಸನುಪೊಗಳಿನರಕವಸಾರುವೆನೆಸಂ
ಕ್ರಂದನಾರ್ಚಿತನಬಿಡೆನು ॥ ೭ ॥ ಉತ್ತರವಪೇಳಿಮಾರು
ತ್ತರವಕೊಡಲಾಗೆ । ಅತ್ಯುಗ್ರದಿಂದಾಶಿರವೆತ್ತಿಘರ್ಜಿಸು
ತೆದ್ದು । ಮತ್ತಿಪಿಡಿದಳೆದುಘಾತಿಸಿದ ಪುರುಷೋತ್ತಮನ
ತತ್ಪದಾಂಬುಜಭೃತ್ಯನ ॥ ಕಿತ್ತಿಟ್ಟುಬಾಯಿದಾಡೆಯುಪಿ
ಡಿದುವಳತೊಡೆಯು । ಮತ್ತೆಪಿಡಿದೊಡದರುಹನೆತ್ತರೊ
ರತೆಯುಕೆಂಡುಚಿತ್ತದಲಿಕಡುನೊಂದು । ಚಿಣ್ಣಮೊರೆಯಿ
ಟ್ಟನಾಚಿತ್ತಜನಪೆತ್ತಾತಗೆ ॥೮॥ ಅನಿತರೊಳಗಾವುದಾ
ದ್ಯನುಕರುಣದಿಂದಲಾ । ಘನತರಾದ್ಬುತಮಹಕರಿಣತರ
ದಂಡನೆಯುನನುವರಿದಿಮುನ್ನಿಸುತನೆನೆಪಿತನನೆನಲಾಗ ।
ನೆನೆದರಹರಿಯಂಘ್ರಿಯಾಮವನಜದಳನಯನನನು । ಮರಿ
ದಾಗಪೊಗಳುತಿರೆ । ಮನದಿಯೋಚಿಸಿದಮತ್ತೊಂದಗು
ರುಮತದೊಳಿಹ । ತನಯರುಗಳೀಹದನತಪ್ಪಿಸುವರಲ್ಲ
ದಿರೆ ತನಗಸಾಧ್ಯವಿದೆಂದನು ॥೯॥ ಎಂದುಚಿಂತಿಸುತಲಾ
ನಂದನನಕರದು । ಈನಂದನನುಮತ್ತಾಮುಕುಂದನನು
ಪೊಗಳುವನು । ಮಂದಮತಿಬಿಡಿಸಿವನತಂದೆಯನುಪೊ
ಗಳಿಸುವ । ಅಂದನಿಮ್ಮದುಕೇಳಿರೋ॥ ಯೆಂದುನೇಮಿಸಿ
ಗುರುವೆಗೊಂದಿಸುತ ತರಳಕೈ । ತಂದುಪ್ರಹ್ಲಾದನಿಂ
ಗಂದುಮಣಿಯುಲುಸಖರಿ । ಗಂಡೊರದನಾಗಲರವಿಂದ

ನಾಭನಕೃತಿಯುಸುಂದರದಮೃದುಭಾವೆಂಯ ॥೧೦॥ ಉ
ಪದೇಶಪಿತ್ತನಾಸಿಪ್ರಣಬಾಲವನೆಂದು। ಚಪಳರಾದರುಹಿಂ
ದಣಪರಿವಿುತಜನ್ಮಗಳ । ವಿಪುಳಪಾಪವನೀಗಿಕ್ಕೃಪೆಂದಾ
ದಪರಿಯೆಂದುಗುಪಿತವಿಲ್ಲದೆಪೇಳುತಾ ॥ ಜಪತಪಧ್ಯಾನ
ಷಟ್ಕರ್ಮನವಿುಗ್ಯಾಕಿನ್ನು । ಸಫಲವಾಯಿತುಪಿತ್ತಜನಸ
ಜನಕರವುನ । ಅಪಭ್ರಷ್ಟನೀ ಶುಕ್ರವಾರ್ಕರ್ಪೇಳಿದಕು
ಟಿಲದುಪಟಿನೀತಿಗಳಸುಡಲೀ ॥೧೧॥ ಯೆಲ್ಲೆಗುರುವಿವ
ನವುಗೆಕೊಳ್ಳುನೀತಿಯುಪೇಳ್ದ ಸೊಲ್ಲಿನೊಳಗರಲಳ್ಳಿನೀ
ತಿಲ್ಲಪರಿಯುಂಬ । ಪುಲ್ಲನಾಭನಧ್ಯಾನಪರತತ್ವರಚನೆಗಳ
ನಿಲ್ಲಕಂಡವುಯುಂದರು॥ ಮಲ್ಲೆವಿನ್ಯಾಕೆನವುಗಿಲ್ಲಗುರು
ನೀನಲ್ಲ । ದಲ್ಲರನುಭಾವಿಸುವರಲ್ಲವೈಕುಂಠ । ದೊಲ್ಲಭನ
ತೋರೆನ್ನುತಲ್ಲರಾಬಾಲಕನಪಲ್ಲವಾಂಘ್ರಿಗೆವುಣಿದರು॥೨॥
ಅನಿತರೊಳುಬಂದನಾ ದನುಜಗುರುವುತೆದೊಳಿಪ। ತನ
ಯುರೆಲ್ಲರುವಿಷ್ಣುವನಜಾಂಘ್ರಿ ವೊಗಳುತಿರೆ । ಘನವುಹಿ
ವೆುನೀನರಿದೆನ್ನ ಪಣನೆಗೊಳನೆಂದೆನುತ ದನುಜೇಶನಡಿಗೆ
ಬಂದಾ॥ ತನಿಗೆನಂಕೆಪುನಿನ್ನತನಯುನಭ್ಯಾಶಿಪವುಚಿನು
ವುಯಹಾತ್ಮನಚರಣಸ್ಮರಣೆಯುನುಸರ್ವರಿಗೆ । ಎಣಿಸಲಳ
ವಡದುನಿನ್ನಣುಗನಂತರವೆನಲು ದನುಜಗರ್ಜಿಸುತೆನ್ದ
ನು ॥೧೩॥ ಬಂದುಸಾಲೆಯೊಳಿರ್ದನಂದನನಬಿಗಿಯುಪ್ಪಿ।
ಕಂದನೀಕಲಿತುದೆನೆಂದುಪೇಳೆಂದೆನಲು। ತಂದೆಲಾಲಿಪುದು
ಗೋವಿಂದನಾ ಚಾರಿತ್ರದಂದವನುಪೇಳ್ವೆನೆಂದಾ॥ ಎಂದ
ಬಾಲಕನೊಳಿಂತೆಂದನಾದೈತ್ಯಪತಿ। ಸಂದುದೆಲ್ಲವುದಾವು

ವಂದಿಸಲುಮುರಹರಗೆ । ತ್ವಂದದಿಂದೆನ್ನ ಓಂಹಿರಣ್ಯಾಕ
ಶ್ಯಪನೆಂಬದೊಂದನೊರಲಿಸುಯೆಂದನು ॥೧೪॥ ಪಿತನ
ಲಾಲಿಸುಹಿಂದೆ ಶತಮುಖನುಸಹಿತ । ದಿಕ್ಪತಿಗಳೆಲ್ಲರುಲ
ಕ್ಷ್ಮೀಪತಿಯನಾಮಾಮೃತವ। ನತಿಶಯದಿಜಪಿಸುವವತಿ
ಗಳಾದವನರಿಯಶ್ರುತಿವಚನಶಬ್ದಗಳಲಿ ॥ ಸತತನೆಂಬಿರ
ಲುಸದ ತಿಯಲ್ಲದನ್ಯದು । ಗತಿಯುಬಯಸುವರುಂಟೆ
ಕ್ಷಿತಿಯೊಳೀಜನ್ಮಕ್ಕೆ। ಮಿತವಿಲ್ಲವಿಷ್ಣುನಾಮವಪೊಗಳ್ವ
ಸುಜನರಿಗೆಗತಿಯಿಲ್ಲದಿಲ್ಲಜಗದೀ ॥೧೫॥ ಯೆಂದರುಪು
ತ್ರಿರಕರ್ಣರಂಧ್ರನಾಟಿದಶಸ್ತ್ರ । ದಂದವಾದುದುಇವನು
ನಂದನನೆಯುನಗೆಮುಖುಕೆಂದೆವರದನ್ಕೈಪೆಯನೊಂ
ದನಾಕೈಸಿದನು ಮಂದರಾದ್ರಿಯಮೇಲಕೆ ॥ ತ್ವಂದದಿಂ
ದೊಯ್ದುಭೂಮಿಗೆಕೆಡಹಿಸೆಂದೆನುತ। ಲಂದುಕಟ್ಟಳೆಯಿ
ತ್ತುಮಂದಿರಕೆಸಾರಲಾ । ಕಂದನನುಖಳದೊಯ್ದುಗೋ
ತ್ರವೇರಿಸಿನಿನ್ನತಂದೆಯನಂಪೊಗಳೆನ್ನಲೂ ॥೧೬॥ ವಾ
ಸುಕೀಶಯನವಾಸವನಮಿತ್ರವನಜಾಕ್ಷ । ಕೇಶವಮುರಾರಿ
ಕಂಸ್ತುಭವಕ್ಷಕನಕಾಕ್ಷ । ನಾವಭೂಸತಿರಮಣನಗಧರಾ
ಚ್ಯುತನಘಕಶಸುಖಭಯವಿನಾಶ ॥ ವಾಸಿತಗ್ನಿತುಪಾ
ಣದಾಸನಿನ್ನದುಜೀಯ । ದೋಷಕರಯನ್ನ ಘಾಸಿಗೊ
ಯ್ದಿಳತಂದು। ಲೇಶದಯವಿಲ್ಲದಾಯಾಸಪಡಿಸುವರೆನ್ನ
ಪೋಷಣೆಯುನಿನ್ನದೆನುತಾ ॥೧೭॥ ವೊರೆಯಿಡುವಬಾಲ
ಕನಪರಿಯ ನೋಡದೆಕೊಂಡು । ಗಿರಿಯಮೇಲಕೆತಂದು
ತರಳನೆನ್ನದೆಪಿಡಿದು । ಚರಣಕರಕಮಲಗಳನುರೆಕಟ್ಟಿನಿ

ದರ್ಸಯದಿಹೊರಳಿಸಿದರಾಗಧರೆಗೆ ॥ ಶಿರಿಧರನೆನೀಸುಗತಿ
ಯೆಂದುಸ್ಮರಣೆಯುಗೈದು। ಕರುಣನಿಧಿಕಾವುದೆಂದೆನುತ
ಕೆಂಗಳುಮುಚ್ಚಿ । ಗಿರಿವರದಜರಿಯೊಳಿರಲುತ್ತಬೀಳೆಧರಣಿ
ಸತಿಮರುಗಿಮಗುವಿನಪಿಡಿದಳು ॥೧೮॥ ಬಾಲಕನಪಿಡಿದು
ಬಿಗಿದಪ್ಪಿಪಾಲಿಸಿಪುಣ್ಯ । ಸೀಲಂದುಬೇಡದೆನ್ನಾಲಿಯಿಂ
ನೋಡೆನ್ನ । ನೀಲವರ್ಣನಪಾದನಿರುತ್ತನಂಬಲು ನಿನ್ನ ಪಾ
ಲಿಪನುಪರಮಪುರುಷ ॥ ಸೂಲಿಸಂಮಿತ್ರ ಸುಚರಿತ್ರ ಗುರು
ಮುನಿಸ್ತೋತ್ರ । ವ್ಯಾಳಶಯನಾಗಾತ್ರ ಪುಷ್ಪಾಂಶುಶಶಿ
ನೇತ್ರ । ಲೀಲೆಯಿಂದಾಪೊರೆವ ಪ್ರೋಗಲೇಕೆಂದಮನೆಬ
ರಲು ಕಾಲಿಗೆರಗುತ್ತಸಾರಿದಾ ॥೧೯॥ ಬಂದುಮಾತೆಪೊಳಗಿ
ದರ್ಕಂಡನಾಕ್ರೃತಿಕೇಳಿ । ಮಂದಿರದೊಳಿರ್ದ ಮಾತೆಯು
ಮರುಗಿಮಗನೆಡೆಗೆ। ಬಂದಾಗಯೆತ್ತಿ ತಕ್ಕೈಸಿಕಣ್ಣಿನಲಿ
ನೀರುತಂದುಸುತಗಿಂತೆಂದ॥ ಇಂದಿರಾಪತಿದೈತ್ಯಬೃಂದ
ದ್ರೋಹಿಯುಅವನಿ। ಗೊಂದಿಸುವದುಳುತ್ತವೆತಂದೆಯಾ
ಜ್ಞೆಯುವಿರ। ಲೆಂದಿಗೂ ನರಕತಪ್ಪುದುಯುನೆಲುಮೈ
ಪ್ಪಣವನು । ಯೆಂದವಮಾತೆಯುಮನ್ನಿಸಿ ತಾಯೆಲಾಲಿಪುದೆ
ನ್ನ ಬಾಯುವಚನವನಿನ್ನ । ಪ್ರಿಯಸೀನುಪೊಗಳಿದೊಡೆ
ಹೇಯುನರಕವುಮುಂದೆ। ನೋಯಲಾರನುಹೀನಜೀವಿಗ
ಳುದ್ಭವಿಸಿ ಆಯಾಸಗಳಸಿಲ್ಕಿಸಿಲ್ಕಿ ॥ ಮಾಯದಪಮಾದ
ಗಳಮಹಿಮಭೋಗವನುಡಲಿ । ತಾಯಸಾರೊಯನಗೆತ್ತಂ
ದೆಯುಯೆಂಬ ಕುರುಕಲ್ಲಿನೋಯುಲ್ಯಾತಕೆನಿನ್ನ। ಜೀವ
ದೊಲ್ಲಭನೆಡೆಗೆತಾಯುನೀತೆರಳೆನ್ನಲೂ ॥೨೦॥ ಮರುಗಿದ

ಳುಮಗನಭಾವದಪರಿಯುಬಣ್ಣಿಸುತ್ತ। ತೆರಳಿದಳುಹರಿಯೆ
ಕರುಣಿಸುಕೆಂದನನ । ನಿನ್ನ ಚರಣನಂಬಿದಬಳಿಕಪೊರೆವ
ಬಿರುದಿನಪರಿಯುರಸನಿನದೆನುತ॥ ಜರಿಗೆಮೋರೆಯಿಡುತ್ತ
ತನ್ನರಮನೆಗೆನಡೆತಂದು । ಅರಸನಿರ್ದೆಡೆಗೈದುಅರಿಯು
ಸುತನೀತಿಯನು । ಧೊರೆಯೆಮನ್ನಿಸಿಮಗನಪೊರೆವುದಿ
ನೆಂದರೆಗೆ ತರುಣಿಗಿಂತೆಂದದೈತ್ಯ ॥೨೨॥ ಬಿಡುಕಾಲವ
ಡದಿನೀಪಡದಮಗನಲ್ಲ । ಪತಿಯಿಡಲು ನಮ್ಮಕುಲಹೆಡ
ಮೃತ್ಯುವಾಗಿಹನು । ನುಡಿಯಲಮ್ಮನೆಂದುನ್ನ ವಡೆಯ
ವಿಷ್ಣುವುಯೆನ್ನುತಡಿಗಡಿಗೆಪೊಗಳುತಿಹನು। ಮಡೆಯ
ನದಮುರಹರಿಯುಕಡೆಯುಸ್ಮರಿಸಲುಶಿರವ । ಕಡಹಿಂದಲ್ಲದೆ
ಬಿಡೆನುಮಡದೆನಿನ್ನರಮನೆಗೆನಡುಯೆನುತಗರ್ಜಿಸಲು ।
ಪೊಡವಿನಡುಗಿದುದೊಡನೆನಡದನತಿರೌದ್ರದಿಂದ ॥೨೩
ಅರಮನೆಗೆಬಂದೋರ್ವ ಚರನಟ್ಟಿಕರೆಸಿದನು । ತರಳನನ
ತಮ್ಮಕುಲಗುರುವುಶುಕ್ರಾಚಾರ್ಯನೆನು । ಬರಲುಸತ್ಕರಿ
ಸಿದನುಹರುಷಮನ್ನಿಸಿದಸಿರಿವರನಸೇವಕನೆನು॥ ಮರುಳಿ
ಕೇಳ್ಮಗನೆಶ್ರೀಹರಿಯನಾಮಮಾಕೃತಿಯು । ಸ್ಮರಿಸಲಾತ್ಮಜ
ಗದಿಸರಿಯೆನಮ್ಮೊಡನವನು । ಅರಿಯನೇಮಗನೆವರಕುರಿ
ಯುತೆರನಂತೆ । ಶಿರಿಹರಿಯೇನಘುನಪೊನಿನಗೆ ॥೨೪॥ ಇ
ನ್ನಾದಡೆತಲೆಮಗನೆಯುನ್ನನೀಪೊಗಳೆನಲು । ಪನ್ನಗಾರಿ
ಧ್ವಜನಪಾದಗಳಿಗೊಂದಿಸುತ । ಓನ್ನಮೋನಾರಾಯಣ
ಯೆಂದುಧ್ವನಿಯೆತ್ತಿ ಚಿಣ್ಣನೊಡಿದಶೃತಿಗಳ॥ ಉನ್ನ
ತದವಚನಗಳುಉಪನಿಷದ್ವಾಕ್ಯದಲಿ।ಚನ್ನ ಕೃಷ್ಣಯೆಂ

ಚೆಲುವನಾವುವಪ್ರೊಗಳೆ । ಮನ್ನಿಸದವುನದಿಕೋಪದಿ
ದೈತ್ಯಪುರಿಗಳದ । ಪನ್ನಗೇಂದ್ರನಪ್ರೋಲ್ದನು ॥೨೫॥ ಎ
ಲೆಹಸುಳೆಹರಿಯಾವನೆಲೆಯಸಳಿರುತಿಹನೆವನೆ । ಒಲುಹ
ನೋಡುವೆನಗೆ ತಿಳಿಯಪೇಳೆಂದೆನಲು । ಅಳುಕದವನೋ
ಡೆಂದನೆಲದೈತ್ಯಕೇಳೊಮ್ಮೆ ನಳಿನನಾಭನಪರಿಯನು॥ ಜ
ಲಧಿಮಧ್ಯದಲಿರುವ ಜಲಧಿಮೇಲೊರಗಿರುವ । ಇಳೆಯು
ಮೂರರಲಿರುವ ಇಳೆಗೊಡೆಯನೆನಿಸಿರುವ । ಒಳಗಿರುವ
ಹೊರಗಿರುವವಲಿಮುಸರ್ವದಲಿರುವ । ನೆಲೆಯಿಲ್ಲನಗಧರ
ನಿಗೆ ॥೨೬॥ ಎನೆಕೇಳಿಕೋಪದಿಂಕನಲೆಗರ್ಜಿಸುತೆದ್ದು
ದನುಜಾಧಿಪತಿ ತನ್ನತನಯನಂದಂಡಿಸುತ । ಚಿನುಮ
ಯಾತ್ಮನತೋರುಸ್ತಂಭದೊಳಗಿಲ್ಲದಿರೆ॥ ಕನಲಿಖಂಡ್ರಿಪೆ
ನೆನ್ನುತಘನರೋಷ ವಹ್ನಿಜ್ವಾಲೆಯಲಿ ಕಿಡಿಯಿಡುತೊ
ಡನೆ । ದಿನಕರದ್ವಯದೀಪ್ತಿದಿವ್ಯಖಡ್ಗ ವಹಿಡಿದು । ತನ
ಯನೆನ್ನದತಲೆಯನರಿವತವಕದಿಬರಲು । ಮನದೊಳಳು
ಕದೆನೆನದಮಧುವೈರಿಯಾ ॥೨೭॥ ತಾತನೀಕಾವುದಿಪಾ
ತಕನುಯನ್ನನುರಕ್ಷ । ಘಾತಿಸುವಲೋಕವಖ್ಯಾತಿ ಮೂರು
ತಿನಿನಗೆ । ಮಾತುವಾಸುಯಮೇಲೆಮಮತೆಯಿರ್ದಡೆನಿ
ನ್ನದೂತನಂದದಿಪಾಲಿಸೊ । ಮಾತೆಮುನಿದಿರುಳೆನ್ನಭಾ
ತೃಬಂಧುಗಳಿಲ್ಲ । ನೀತಿಯುಲ್ಲವುಯೆಂಬಮಾತಪೇಳ್ವರ
ಕಾಣೆ । ಭೂತನಾಥಾದಿಪರಬ್ರಹ್ಮವಂದಿತನೋಡು ಈತ
ನಿಂಮ್ಮತನಾಗುವೆ ॥೨೮॥ ತರಹರಿಸಲಾರೆನೀದುರುಳನು
ರವಣೆಗೆನ್ನಬರಿನೋಡದೆ ನಿನ್ನಸಿರಿಯುಸಂಪತ್ತಿನಲಿ ಮು

ರದುವರೆಯೊಳಗಿಪ್ಪೆವುರಹರಿಯೆನೋಡೆನ್ನತರಿದುಸು
ಡುವಧರೆಯೊಳು ॥ ಕರುಣವಿನಿತ್ಯಾಕಿಲ್ಲ ಕಾವರಿಳೆಯೊಳ
ಗಿಲ್ಲ । ಮರಣನಿಶ್ಚಯುವಲ್ಲದಿರುವುಕಾಣಿಸಲಿಲ್ಲ । ದುರುಳ
ಮನ್ನಿಪುದಿಲ್ಲದೋಷಕಂಜುವನಲ್ಲ ಹರಿಯೆನೀನಲ್ಲದಿಲ್ಲಾ॥
ಯೆಂದೊರಲುತಿಹದೈತ್ಯನಂದನನನುಡಿಯು । ಗೋವಿಂ
ದನಾಲಿಸುತಾಗಬಂದುಕನಲುತಕೋಪಬಂದು ಶಿಖಿಮಯು
ದ ಲರವಿಂದನಾಭನುಗೋಷ್ಠದಿಂದಾಕಂಭದಲಿರ್ದನು ॥
ಯೆಂದಿನಂದದಿದೈತ್ಯನಂದುಕೋಪದಿತನ್ನ । ನಂದನನ
ಕಠಿಣದಿಂಕೊಂದೆಳನೆನೆಂದು ಬರೆನೊಂದನಿನ್ನಾಣೆನಾದ
ವಿನುತನೋಡೆನಲುಪೇಂದ್ರವರದನು ಹೊರಟನು ॥೩೦॥
ನಗಧರನತಾಳ್ದನರಮೃಗದರೂಪೊಂದಾಗಿ । ಪೊಗೆಯು
ಡರಿಕಂಭವಿಬ್ಬಗೆಯಾಗಿಧಳ್ಳುರಿಯು । ಭುಗಿಭುಗಿಲೆನುತೆ
ದ್ದನಗಹರನಕೈಲಾಸಕೆಗರಿತಾಷಣಕಿಡಿಗಳು॥ ನಗವೈರಿ
ಪುರಿಯುಮಿಗೆಜಗವಸೃಷ್ಟಿಪನಾಲ್ಕು । ಮೊಗದವನಟ್ಟ
ಣವನೆಗದುಹೂವಕನಡರೆ । ನಿಗಮಗೋಚರನಾಜಗವಳ
ತರಿಸೆದನುಮೊಗವುಮೊರೆಯಿಡಲುಕೇಳೀ ॥ ೩೧ ॥ ಸಿಟ್ಟಿ
ನಿಂಬಂದಾಗಕಟ್ಟದಾನವನತಾ । ಕಟ್ಟನಿಷ್ಠುಲುವಮು
ರಿದೊಟ್ಟಬಾಗಿಲೊಳುಮಿಗೆ । ದಿಟ್ಟವಹತೊಡೆಯುಮೇಲಿ
ಟ್ಟನಖಶಸ್ತ್ರದಿಂಮುಟ್ಟಹೊಟ್ಟೆಯುನುಬಗಿದಾ॥ ತೊಟ್ಟ
ಡುವಶೋಣಿತವನಟ್ಟನಾಪ್ರೋಷಿಸುತ । ಇಟ್ಟುಕರುಳಿನ
ಮೇಲೆಜಟ್ಟೆಯಹಾದನುಜಗದಿ । ದುಷ್ಟಮೂರುತಿಯೆಂ
ದುಸುರರುಪೊಗಳುತ ಪುಷ್ಪವೃಷ್ಟಿಗಳ ಸುರಿದರಾಗ"

೩೨॥ ದುರುಳನನುತ್ತರಿದುನೆರಹರಿಯರುಕೋಪಜ್ವಾಲೆ। ವ
ಮರಸದುರಕಲಜಗವ ಗಿರಿಜೆಯುರಸನುವಡನೆ ಸರಸಿಜಾ
ಸನಸಹಿತ। ಸುರಪತಿಯುಮೊದಲಾಗಿ ನೆರದುದಿಕ್ಪಾಲ
ಕರುಯೆಲ್ಲ॥ ಪರಿಪರಿಯಲರ್ಚಿಸುತ ಸ್ಮರಣೆಗೈಯ್ಯಲು
ಶೌರಿ। ಕರುಣವಿನಿತಿಲ್ಲದಂತುರುಹುತಿರೆಲೋಕವನು।ಸ್ಮ
ರಿಪದರುಶಿರಿಯುಸತ್ಕರಿಸಿದರು ಬಾಲಕನ ನರಿಯುವನ್ನಿಸ
ಲೋಸುಗಾ॥೩೩॥ ವಡನೆಬಾಲಕನುಅಡಿಯಿಡುತಲಕ್ಷ್ಮೀ
ಸಹಿತ। ನಡೆತರಲುಕಂಡುಕೈಪಿಡಿದೆಳದುವುಡದಿಯನು
ತೊಡೆಯುಮೇಲಿಟ್ಟುಪ್ರೈದಡವಿ ಬಾಲನಯತ್ತಿನುಡಿದನು
ರಸಿಹ್ಮನಾಗಾ॥ ಬಿಡುವುಗನೆನಿನ್ನ ಮುನಯೊಳಗಿರ್ದ್ದಭಯ
ಗಳನು। ವುಡಿಪರಾಜಿಗನಿನ್ನ ಪ್ರೊಡವಿಯಲಿಸುಖಬಾಳು
ನಡೆಯುನುತಮುಗವಮುದ್ದಾಡಿ॥ಮುಗುಳ್ನಗೆಯಿಂದತೊ
ಡೆಯುಬಿಟ್ಟಳುಹಿಂದಾಗ॥೩೪॥ ಹರಬ್ರಹ್ಮಮೊದಲಾದಸು
ರರುದಿಕ್ಪಾಲಕರು। ಹರಿಸಿದರುತರಳಸುಖಬಾಳು ಧರಣಿ
ಯೊಳಂದು। ವೊರದುದಾದೇವದುಂದುಭಿಗಳಂಬರದೆಡೆ
ಯುನೆರದನಾರಿಯರಾಷ್ಟಣಾ॥ ಹರಿಯೆಕರುಣಾಕಂಜ
ಜನಯ್ಯನೀಯೆಮ್ಮ। ಶರಯುಹರಿಪದೆಯೆಂದು ಸ್ಮರಿಸಿ
ಸ್ವರ್ಗಕಸಾರೆ। ಹರನುಮೊದಲಾದದಿಕ್ಪಾಲಕರುಸಾರಿದ
ರು। ಹರಿಯುಂಘ್ರಗೆರಗಿವುಬದಿ॥೩೫॥ ಪಿಡಲಸುತಸ
ಹಿತಲಾಮುಡುಬವುನ್ನಿಸಿಕೆಳುಹಿ। ನಡದುವೈಕುಂಠಪುರ
ದೊಡೆಯನಾದನುಶೌರಿ॥ ಅದಿಯುನೆಂಬಿಹದಾಸ ರೆಡಬಿ
[illegible]ನೆಕಾಯಿದ್ದಹನು। ಸುಡಿಯಲಳವಡದುಮುಹಿಮೆಮ್ಮಡ

ನಸಖ । ನಡಿಯುಮನಸ್ಮೃಢದಿಭಜಿಸುವಸುಜನರೆಡೆಗೆಬಾ ರರು । ಜಗದೊಳಮರಾಜಕಿಂಕರರು । ಜಡದೇಹಿಗಳಿಗೆಲ್ಲ ಕೊಡುವಸದ್ಗತಿಗಳನು । ಕಡುಕೃಪಾ ನಿಧಿಕೃಷ್ಣನು ॥ ೩೭॥ ಆರಾದಡಿವಸುಉದಯದಲಿಭಜಿಸಲು । ಪೂರ್ವ ಪ್ರಾರಬ್ಧಕರ್ಮಬಯಲಾಗಿಪರಿದೋಡುವದು । ಶ್ರೀರಮಣ ನೊಲಿದುಸದ್ಗತಿಯಕೊಡುವನುಕಡೆಯು । ಲಾರೊಂದು ಜನ್ಮಗಳಿಗು। ವಾರಿಜಾಕ್ಷನಪಾದವನಜವನ್ನು ಪೊಗಳಿದೊ ಡೆ। ಚಾರುತರಸಾಮ್ರಾಜ್ಯಸಂಪದವುಸಿದ್ಧಿಪುದು। ಧಾರು ಣಿಯೊಳತ್ಯಧಿಕವೆನಿಪ । ಘಂಟಾಪುರಿಯನಾರಾಯಣನ ಕರುಣದಿ । ಶೌರಿಚನ್ನವೇಣಿನಾರಾಯಣ । ಚನ್ನವೇಣಿನಾ ರಾಯಣ। ವಂದಿತಬ್ರಹ್ಮಪನ್ನಗಾಧಿಪಶಾಯಿಪಾವಕಾಂ ಬಕಮಿತ್ರ । ಸನುತಾನಂದಮುಖ್ಯಸಕಲಸನ್ಮುನಿಸೌಖ್ಯ ಚನ್ನಕೇಶವಪಾಹಿಮಾಂ ॥ ... ॥೩೮॥

ಇಲ್ಲಿಗೆ ಪ್ರಭಾತದೋದಯರಾಗವು

ಸಂಪೂರ್ಣ ಮಂಗಳಂ.

ತೆನುಗು ಉದಯರಾಗಮುಲು.

ಮೇಲುಕೊನವೈಸಾಂಬಮೂರ್ತಿ । ಮೇಲುಕೋಜ ಗನ್ನೇಕನಾಯಕ । ಮೇಲುಕೋಮುಕ್ತಿಪ್ರದಾಯಕಮೇ ಲುಕೊನವೈ । ಹರಹರಾಮೇಲುಕೊನವೈ ॥ಪಲ್ಲ॥ ರೇಚಕ ಪೂರಕಕುಂಭಕಾಲು । ರೆಂಟಿನೊಕಟಿಯನರುಗೂರ್ಚಿ ಯು । ಸೂಚಿಕುಂಬುನದೀಪಕಳಿಕಲು । ಚುಟ್ಟುನದ

ಚಿನೂಹರ ॥೧॥ ಪ್ರಣವನಾದಂಬನೇಟಿದು ಪ್ರಣವ
ಪೂರಿತರಾಗಸರಳಿನಿ । ಪ್ರಣವಪಂಚಾಸ್ಮರಣೆಯುಕೆಂ
ಬುಗೆಪ್ರಣತಿಜೀಯುಚಿನೂ ॥೨॥ ಘಣಘಣಾಯುನಿಘಂ
ಟನಾದವುಕರ್ಮೇಂದ್ರಿಯ ಮುಲಂಟವೆುರೆಯುಚಿಧಣ
ಧಣುಕುವಚ್ಚಿನಲಿಚಿರಿದೇವಕನ್ಯೆಕಲೂ ॥೩॥ ಪಂಚಭೂತ
ಮುಲ್ಯೆದುವೊದಲುಗ।ಪಂಚತತ್ವಮುಲಂದುಗಲಸಿಯು
ಪಂಚಹಿತುಡನುದತ್ತಯೋಗಿನಿಭಜನಚೇಯುಚಿನೂ ॥
೪॥ ತೆಲ್ಲವಾರೆನುತಮುದುಲಣಿಗೆನು । ಯುಲ್ಲದಿಕ್ಕುಲಯ
ಲುಗುಬಾರೆನೆಪುಲ್ಲನಾಭುಡು ವುದಯುವಾಯುನು। ತ್ರೈ
ಲೋಕ್ಯತೇಜಮುನಾ ॥ ಮೇಲುಕೊನವೈ ॥ ॥೫॥

ಇತಿ ಉದಯುರಾಗವು ಸಂಪೂರ್ಣಂ.

ಪ್ರಕಟನೆ.

ೀಷಾ:-ಚಿತ್ರ ವಿಚಿತ್ರವಾದ ಕಥೆ
ಾಯಿ ಕಥೆ.
ಂಗಿಯ ಕಥೆ
ಮಹಾತ್ಮ್ಯೆ ಕಥೆಗಳು
ಾದುಷಾ ಬೀರಬಲ್ಲರ ಕಥೆ
್ರೀ ಶುಕಸಪ್ತತಿ ಕಥೆ
್ನ ನಗಿಸುವ ಕಥೆ
ಾಮಕೃಷ್ಣನ ವಿನೋದ ಕಥೆಗಳು
ಬತ್ತೀಸಪುತ್ಥಳಿ ಕಥೆ
ಂದ್ರ ಮಹಾರಾಯನ ಕಥೆ
ಕಥೆ

ಕಥೆ
ನ ಕಥೆ
ಕಥೆ
ಂತಿ ಪುಣ್ಯಚರಿತ್ರ ಕಥಾರೂಪ
ಕಥಾಸಂಗ್ರಹವು
ುಹಾಭಾರತ ಕಥಾರೂಪ (ದೊಡ್ಡಕ್ಷರ)
ವತ ಕಥಾಸಂಗ್ರಹ
ಧಗಳು ಸಹಿತ (ದೊಡ್ಡಕ್ಷರ)
ತ ಕಥಾರೂಪ (ದೊಡ್ಡಕ್ಷರ)

—(ನಮ್ಮ ವಿಳಾಸ.)—

ಶ್ರೀ. ಶಿವಲಿಂಗ...

ಕರ್ನಾಟಕ ಬುಕ್ ಡಿಪೋ